# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 270 | Volume - 01 Issue - 270
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | Title- Code: KARKAN 28269
ಚಿತ್ರದುರ್ಗ | Chitradurga
ದಿನಾಂಕ: 17–05–2024 ಶುಕ್ರವಾರ | Date: 17-05-2024 Friday
ಪುಟ: 4 | Page: 4
ಬೆಲೆ : ರೂ.2–00 | Price: Rs. 2-00



ಒಳಪುಟದ ಸುದ್ದಿಗಳು
ವಕೀಲರ ಸಹಕಾರ ಪ್ರಧಾನ: ರೇಷ್ಮ ಕಲಕಪ್ಪಗೋಣಿ 2
ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ಮತದಾನ ಕೇಂದ್ರಗಳ ಪಟ್ಟಿ ಪ್ರಕಟ 3
ಕಲಿಕಾ ಪುನಶ್ಚೇತನ ಮಕ್ಕಳ ಕಲಿಕೆಯ ಪುನರ್ಮನನ 4



ಸುದ್ದಿ, ಜಾಹಿರಾತಿಗೆ 9686622252


# ಐವರ ಅಸ್ಥಿಪಂಜರ ಪ್ರಕರಣದ ಸಾವಿನ ಅನುಮಾನಕ್ಕೆ ಎಫ್‌ಎಸ್‌ಎಲ್ ವರದಿ ಉತ್ತರ

» **ನಮ್ಮಜನ ಸಮಾಚಾರ**

ಚಿತ್ರದುರ್ಗ: ನಗರದ ಚಳ್ಳಕೆರೆ ಗೇಟ್ ಸಮೀಪದಹಳೆಬೆಂಗಳೂರುರಸ್ತೆಯಲ್ಲಿರುವ ಪಾಳುಬಿದ್ದ ಜಗನ್ನಾಥರೆಡ್ಡಿ ಎಂಬುವವರ ಮನೆಯಲ್ಲಿ 2023ರ ಡಿಸೆಂಬರ್ 28ರಂದು ನಿವೃತ್ತ ಇಂಜಿನಿಯರ್ ಜಗನ್ನಾಥರೆಡ್ಡಿ, ಪತ್ನಿ ಪ್ರೇಮಕ್ಕ, ಪುತ್ರಿ ತ್ರಿವೇಣಿ, ಪುತ್ರ ಕೃಷ್ಣಾರೆಡ್ಡಿ ಹಾಗೂ ನರೇಂದ್ರರೆಡ್ಡಿ ಸೇರಿದಂತೆ ಐದು ಅಸ್ಥಿಪಂಜರ ಪತ್ತೆಯಾಗಿದ್ದವು. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಎಸ್‌ಎಲ್ ರಿಪೋರ್ಟ್ ಬಂದಿದ್ದು, ಚಿತ್ರದುರ್ಗ ಪೊಲೀಸರ ಕೈ ಸೇರಿದೆ. ಈ ವರದಿಯಲ್ಲಿ ಸಾವಿನ ಕುರಿತು ಸತ್ಯಾಂಶ ಬಯಲಾಗಿದೆ.

**ಚಿತ್ರದುರ್ಗ ಎಸ್ಪಿ ಹೇಳಿದ್ದಿಷ್ಟು:** ಇನ್ನು ಈ ಕುರಿತು ಪತ್ರಿಕಾಗೋಷ್ಠಿನಡೆಸಿ ಮಾತನಾಡಿದ ಚಿತ್ರದುರ್ಗ ಎಸ್ಪಿ ಧರ್ಮೇಂದರ್ ಕುಮಾರ್ ಮೀನಾ, ‘5 ಅಸ್ಥಿಪಂಜರ ಸಿಕ್ಕ ತಕ್ಷಣ, ಪೂರ್ತಿ ಮನೆ ಅಸ್ತವ್ಯಸ್ತತೆಯಲ್ಲಿತ್ತು. ಕೂಡಲೇ ಎಫ್‌ಎಸ್‌ಎಲ್ ಟೀಂ ಕರೆಸಿ ಸೂಕ್ತ ತನಿಖೆಗೆ ಆದೇಶ ನೀಡಲಾಯಿತು.

ತನಿಖಾ ತಂಡ ಹಾಗೂ ಈಖಐ ತಂಡ ಸೇರಿ ಆ ಮನೆಯಿಂದ 71 ಸಾಕ್ಷ್ಯಗಳನ್ನು ಕಲೆ ಹಾಕಲಾಗಿತ್ತು. ಎಲ್ಲಾ ಸ್ಯಾಂಪಲ್ಸ್ ಗಳನ್ನು ದಾವಣಗೆರೆ, ಬೆಂಗಳೂರು



ಲ್ಯಾಬೋರೇಟರಿಗೆ ಕಳುಹಿಸಲಾಗಿತ್ತು. ಇದು ತುಂಬಾ ಸೆನ್ಸಿಬಲ್ ಕೇಸ್ ಆಗಿದ್ದರಿಂದ ರಿಪೋರ್ಟ್ ತಡವಾಗಿ ಬಂದಿದೆ.

ಈ ಬಗ್ಗೆ ಮೃತರ ಸಂಬಂಧಿಕ ಪವನ್ ಕುಮಾರ್ ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದು ಜಗನ್ನಾಥ ರೆಡ್ಡಿ ಕುಟುಂಬವೇ ಎಂದು ಪವನ್ ದೂರು ನೀಡಿದ್ದರು. ಈಖಐ ವರದಿಯಲ್ಲಿ ದೇಹಗಳ ಯಾವುದೇ ಭಾಗದಲ್ಲಿ ಗುರುತುಗಳು ಕಂಡು ಬಂದಿಲ್ಲ. ಅಸ್ಥಿಪಂಜರದ ಸ್ಯಾಂಪಲ್ ಗಳಲ್ಲಿ ನಿದ್ದೆ ಮಾತ್ರೆಗಳು ಸೇವನೆ ಮಾಡಿರುವ ಮಾಹಿತಿ ಸಿಕ್ಕಿದೆ.

ಐದು ಮಂದಿ ನಿದ್ದೆ ಮಾತ್ರೆ ಸೇವನೆಯಿಂದ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಮಾನಸಿಕ ಖಿನ್ನತೆ, ಆರೋಗ್ಯ ಸಮಸ್ಯೆಯಿಂದ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ.

ಈಖಐ ರಿಪೋರ್ಟ್ ಪ್ರಕಾರ ನಿದ್ದೆ ಮಾತ್ರೆ ಸೇವನೆಯಿಂದಲೇ ಸಾವಾಗಿದೆ. ಆದ್ರೆ ಕಿಚನ್‌ನಲ್ಲಿ ಇರುವ ಎರಡು ಪಾತ್ರೆಗಳಲ್ಲಿ ಸೈನೈಡ್ ಸಿಕ್ಕಿದೆ ಎಂದು ಈಖಐ ನಲ್ಲಿ ಪತ್ತೆಯಾಗಿದೆ. ಅಸ್ಥಿಪಂಜರಗಳ ದೇಹದಲ್ಲಿ ಸೈನೈಡ್ ಸೇವನೆ ಮಾಡಿರುವುದು ಕಂಡು ಬಂದಿಲ್ಲ. ಆ ಮನೆಯಲ್ಲಿ ಔಷಧಿಗಳು, ಮಾತ್ರೆಗಳು ಸಿಕ್ಕಿವೆ. ನಮ್ಮ ತನಿಖೆ ಪ್ರಕಾರ ಫೆಬ್ರವರಿ, ಮಾರ್ಚ್ 2019 ರಲ್ಲಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಪೋಸ್ಟ್ ಮಾರ್ಟ್ಂ ರಿಪೋರ್ಟ್ ನಲ್ಲಿ ಖಚಿತವಾಗಿ ಹೇಳಲಾಗಿಲ್ಲ. ಆದ್ರೆ, ನಮ್ಮ ಎಲ್ಲಾ ರೀತಿಯ ಆಯಾಮಗಳ ತನಿಖೆಯಲ್ಲಿ ಈ ಸತ್ಯಾಂಶ ಬೆಳಕಿಗೆ ಬಂದಿದೆ. ಮುಂದುವರೆದ ತನಿಖೆಯನ್ನು ಅಕಖ ಗೆ ಒಪ್ಪಿಸಲಾಗಿದೆ. ಇದು ಸಾವಿಗೆ ಸೂಕ್ತ ಕಾರಣ ಏನು ಎಂಬುದು ಬೆಳಕಿಗೆ ಬರಲಿದೆ. ಅಕಖ ನೇತೃತ್ವದಲ್ಲಿ ತನಿಖೆ ಮುಂದುವರೆದಿದೆ ಎಂದರು.

# ಕಣ್ಣಿನ ತಪಾಸಣೆಗೆ ಅತ್ಯಾಧುನಿಕ, ಉತ್ತಮ ತಂತ್ರಜ್ಞಾನವಿರುವ ಉಪಕರಣಗಳ ಪೂರೈಕೆ

## ಶೀಘ್ರ ಕಣ್ಣಿನ ತೊಂದರೆ ಪತ್ತೆಹಚ್ಚಲು ಸಹಕಾರಿಅಂಧರ ಬಾಳಿಗೆ ಬೆಳಕಾದ “ಆಶಾಕಿರಣ”

» **ಚಿತ್ರದುರ್ಗ**

ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿವಾರಣಾ ಕಾರ್ಯಕ್ರಮದ ವತಿಯಿಂದ ಜಿಲ್ಲೆಯಾದ್ಯಂತ ಎರಡನೇ ಹಂತದ ಆಶಾಕಿರಣ ಕಾರ್ಯಕ್ರಮ ನಡೆಯುತ್ತಿದ್ದು, ಅಂಧರ ಬಾಳಿಗೆ “ಆಶಾಕಿರಣ” ಸಹಕಾರಿಯಾಗಿದೆ.

ಎಲ್ಲಾ ವಯಸ್ಸಿನವರಿಗೆ, ಶಾಲಾ ಮಕ್ಕಳಿಗೆ ಸಮಗ್ರವಾಗಿ ಕಣ್ಣಿನ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ಪ್ರಾಥಮಿಕ ಹಂತದಲ್ಲೆ ಆಶಾ ಕಾರ್ಯಕರ್ತೆಯರು ಪ್ರತಿ ಮನೆ ಮನೆಗೆ ಭೇಟಿ ನೀಡಿ ಕಣ್ಣಿನ ತೊಂದರೆ ಇರುವವರಿಗೆ ಪ್ರಾಥಮಿಕ ತಪಾಸಣೆ ಮಾಡಿದೆ.

ಪುಟ ↘ 2



# ಕ್ರಿಕೆಟ್ ಬೆಟ್ಟಿಂಗ್ : ಪಾವಗಡ ರಸ್ತೆಯ ಸಾರ್ವಜನಿಕರ ಸ್ಥಳದಲ್ಲಿ ವ್ಯಕ್ತಿ ವಶ

» **ಚಳ್ಳಕೆರೆ**

ಕಳೆದ ಕೆಲವು ತಿಂಗಳುಗಳಿಂದ ರಾಜ್ಯದ ಬೇರೆ, ಬೇರೆ ಭಾಗಗಳಲ್ಲಿ ಐಪಿಎಲ್ ಪಂದ್ಯಾವಳಿಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಯಾವ ತಂಡ ಮತ್ತು ಎಷ್ಟು ರನ್ ಹೊಡೆಯ ಬಹುದು ಎಂಬುವುದನ್ನು ಊಹಿಸಿಕೊಂಡು ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದ ತಂಡದ ಮೇಲೆ ಪೊಲೀಸರು ದಾಳಿ ನಡೆಸಿದ್ದು, ಓರ್ವ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಪಾವಗಡ ರಸ್ತೆಯ ಸಾರ್ವಜನಿಕ ಸ್ಥಳದಲ್ಲಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ನಿರತನಾಗಿದ್ದ ತೇಜಸ್ ಮತ್ತು ಇತರರು ಮೇ.14ರಂದು ಡೆಲ್ಲಿ ಕ್ಯಾಪಿಟಲ್ ಮತ್ತು ಲಕ್ನೊಸೂಪರ್‌ಕಿಂಗ್ ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆಯುತ್ತಿದ್ದು, ಈ ಸಂದರ್ಭದಲ್ಲಿ 100ಕ್ಕೆ 1000 ಸಾವಿರ ಕೊಡುವುದಾಗಿ ಸಾರ್ವಜನಿಕರಿಗೆ ಆಮೀಷವೊಡ್ಡಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ನಿರತರಾಗಿದ್ದ ತೇಜಸ್ ಮತ್ತು ಇತರೆ ಮೂವರನ್ನು ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಠಾಣಾ ವೃತ್ತ ನಿರೀಕ್ಷಕ ಕೆ.ಕುಮಾರ್, ಕ್ರಿಕೆಟ್ ಬೆಟ್ಟಿಂಗ್ ಒಂದು ರೀತಿ ಮಾಫೀಯ ಇದ್ದಂತೆ ನಗರದ ಯಾವುದೇ ಪ್ರದೇಶದಲ್ಲಿ ಕ್ರಿಕೆಟ್ ಬೆಟ್ಟಿಂಗ್ ನಡೆದರೆ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ.

## ಪ್ರಮುಖ ಸುದ್ದಿ

# ವಿಧಾನ ಪರಿಷತ್ ಚುನಾವಣೆ: ಬಿಜೆಪಿ ಮತಯಾಚನೆ

» **ಚಿತ್ರದುರ್ಗ**

ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಸರ್ಕಾರ ಹೆಚ್ಚಿನ ಕಾಳಜಿಯನ್ನು ತೋರದೆ ವಿವಿಧ ರೀತಿಯಾ ಆದೇಶಗಳನ್ನು ಜಾರಿ ಮಾಡುವುದರ ಮೂಲಕ ಮಕ್ಕಳು ಮತ್ತು ಶಿಕ್ಷಕರಿಗೆ ಹೊರೆಯಾಗಿದೆ ಇದನ್ನು ತಪ್ಪಿಸಲು ಪರಿಷತ್‌ನಲ್ಲಿ ಬಿಜೆಪಿಯ ಸಂಖ್ಯಾ ಬಲ ಹೆಚ್ಚಾಗಿರಬೇಕು ಈ ಹಿನ್ನಲೆಯಲ್ಲಿ ಈ ಬಾರಿಯ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿ ವೈ.ಎ.ನಾರಾಯಣಸ್ವಾಮಿಯವರಿಗೆ ಮತವನ್ನು ಹಾಕುವಂತೆ ಮತದಾರರಿಗೆ ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್ ಮನವಿ ಮಾಡಿದರು.





ನಗರದ ಜೆಎಂಐಟಿಯಲ್ಲಿ ಇಂದು ವಿವಿಧ ಕಾಲೇಜಿನಲ್ಲಿನ ಮತದಾರರನ್ನು ಭೇಟಿ ನೀಡುವುದರ ಮೂಲಕ ಮತಯಾಚನೆಯನ್ನು ಮಾಡಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ದೇಶದಲ್ಲಿ ಎನ್.ಇ.ಪಿ.ಯನ್ನು ಜಾರಿ ಮಾಡಲು ಹೊರಟಿದೆ ಇದರಿಂದ ಈಗ ಅಲ್ಲದಿದ್ದರೂ ನಮ್ಮ ಮುಂದಿನ ಪೀಳೀಗೆಗೆ ಇದರ ಪ್ರಯೋಜನ ದೊರಕಲಿದೆ.

ಅದರೆ ರಾಜ್ಯ ಸರ್ಕಾರ ಇದನ್ನು ವಿರೋಧಿಸುತ್ತಿದೆ, ಇದರ ಬದಲಿಗೆ ಎಸ್.ಇ.ಪಿ.ಯನ್ನು ಜಾರಿ ಮಾಡಲು ಮುಂದಾಗಿದ್ದು ಇದಕ್ಕಾಗಿ 15 ಜನರ ಸಮಿತಿಯನ್ನು ರಚನೆ ಮಾಡಿದೆ ಇದರಲ್ಲಿ ಮೂರು ಜನ ಮಾತ್ರ ಕರ್ನಾಟಕದವರಾಗಿದ್ದರೆ ಉಳಿದ 12 ಜನ ಬೇರೆ ರಾಜ್ಯದವರಾಗಿದ್ದಾರೆ ಅಲ್ಲದೆ ಇದರ ಅಧ್ಯಕ್ಷರು ದೆಹಲಿಯವರಾಗಿದ್ದಾರೆ, ನಮ್ಮ ರಾಜ್ಯದ ಶಿಕ್ಷಣದ ಬಗ್ಗೆ ನಿರ್ಧಾರ ಮಾಡಲು ಬೇರೆ ರಾಜ್ಯದವರನ್ನು ಸರ್ಕಾರ ನೇಮಕ ಮಾಡಿರುವುದು ನಮ್ಮ ದುರಂತ ಎಂದರು.

ಕಾಂಗ್ರೆಸ್ ಸರ್ಕಾರ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡು ಕಾನೂನುಗಳನ್ನು ಮಾಡಿ ಪರಿಷತ್‌ಗೆ ಕಳುಹಿಸುತ್ತಾರೆ ಇಲ್ಲಿ ನಮ್ಮ ಬಿಜೆಪಿಯ ಸಂಖ್ಯೆ ಹೆಚ್ಚಾಗಿದ್ದರೆ ಅದು ಸರಿಯಾಗಿ ಇದ್ದರೆ ಪಾಸು ಮಾಡಬಹುದು.

ಆದರೆ ಕೆಲವೊಮ್ಮೆ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಾಗ ಅದನ್ನು ತಿರಸ್ಕರಿಸಬಹುದು ಇದಕ್ಕೆ ನಮ್ಮ ಸಂಖ್ಯಾ ಬಲ ಹೆಚ್ಚಾಗಿರಬೇಕಿದೆ ಇದರ ಬದಲು ಕಾಂಗ್ರೆಸ್ ಪಕ್ಷದ ಬಳ ಹೆಚ್ಚಾಗಿದ್ದರೆ ಅದು ಪಾಸಾಗುತ್ತದೆ ಇದರಿಂದ ಮುಂದೆ ಮಕ್ಕಳು ಮತ್ತ ಶಿಕ್ಷಕರಿಗೆ ತೊಂದರೆಯಾಗುತ್ತಿದೆ ಈ ಹಿನ್ನಲೆಯಲ್ಲಿ ನಿಮ್ಮ ಸಹಾಯ ಅಗತ್ಯವಿದೆ ಎಂದ ಅವರು, ನಾರಾಯಣಸ್ವಾಮಿಯವರು ಕಳೆದ ಮೂರು ಬಾರಿ ಶಾಸಕರಾಗಿ ಉತ್ತಮವಾಗಿ ಕೆಲಸವನ್ನು ಮಾಡಿದ್ದಾರೆ ಇದರ ಬಗ್ಗೆ ನಿಮಗೂ ಸಹಾ ತಿಳಿದಿದೆ. ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದಾರೆ. ಮುಂದೆಯೂ ಸಹಾ ನಿಮ್ಮ ಸೇವೆ ಮಾಡಬೇಕಾದರೆ ನಾರಾಯಣಸ್ವಾಮಿಯವರನ್ನು ಬೆಂಬಲಿಸಿ ಚುನಾವಣೆಯಲ್ಲಿ ಅವರಿಗೆ ಮತವನ್ನು ಹಾಕಬೇಕಿದೆ ಬೇರೆಯವರಿಂದಲೂ ಸಹಾ ಹಾಕಿಸಿ ಎಂದು ನವೀನ್ ಮತದಾರರಲ್ಲಿ ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷ ತನ್ನ ಪ್ರನಾಳಿಕೆಯನ್ನು ಶಿಕ್ಷಕರಿಗೆ ವಿವಿಧ ರೀತಿಯ ಭರವಸೆಯನ್ನು ನೀಡಿತ್ತುಆದರೆಅವುಗಳನ್ನುಈಡೇರಿಸುವಲ್ಲಿ ವಿಫಲವಾಗಿದೆ ಇದರಿಂದ ಶಿಕ್ಷಕರು ಅತಿಥಿ ಉಪನ್ಯಾಸಕರು ಹೋರಾಟವನ್ನು ಮಾಡಿದರು

ಪುಟ ↘ 2

## ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

## ಫಾಸ್ಟ್ ನ್ಯೂಸ್

### ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ

» **ಚಿತ್ರದುರ್ಗ**

ಚಿತ್ರದುರ್ಗ ತಾಲ್ಲೂಕಿನ ಕುಂಚಿಗನಾಳು ಸರ್ಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಥಮ ಪಿಯುಸಿ ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಶೇ.75 ರಷ್ಟು ಅಲ್ಪಸಂಖ್ಯಾತರಿಗೆ ಮತ್ತು ಇನ್ನುಳಿದ ಶೇ.25ರಷ್ಟು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾಗಿರುತ್ತವೆ. ಕಾಲೇಜಿಗೆ ಪ್ರವೇಶ ಪಡೆಯುವುದರಿಂದ ಪದವಿ ಪೂರ್ವ ಶಿಕ್ಷಣದ ಜೊತೆಗೆ ಸಿಇಟಿ, ನೀಟ್, ಜೆಇಇ ಮತ್ತು ಸಿಎ, ಸಿಎಸ್‌ಎಟಿ ಆನ್‌ಲೈನ್ ಮತ್ತು ಆಪ್‌ಲೈನ್ ತರಗತಿಗಳು ನಡೆಸಲಾಗುವುದು ಮತ್ತು ಕಲಿಕಾ ಸಾಮಾಗ್ರಿಗಳನ್ನು ಹಾಗೂ ಇತರೆ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುವುದು. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಪದವಿ ಪೂರ್ವ ಕಾಲೇಜು ಸಂಪರ್ಕಿಸಬಹುದು ಎಂದು ಪ್ರಾಂಶುಪಾಲ ಬಿ.ಲಿಂಗರಾಜ್ ತಿಳಿಸಿದ್ದಾರೆ.

### ಮೇ.20ರಂದು ವಿಶ್ವ ಜೇನು ದಿನಾಚರಣೆ

» **ಚಿತ್ರದುರ್ಗ**

ಬೆಂಗಳೂರು ಕೃಷಿ ತಂತ್ರಜ್ಞರ ಸಂಸ್ಥೆ ಹಾಗೂ ಚಿತ್ರದುರ್ಗದ ಕೃಷಿ ತಂತ್ರಜ್ಞರ ಸಂಸ್ಥೆ ಪ್ರಾದೇಶಿಕ ಘಟಕ ವತಿಯಿಂದ ಇದೇ ಮೇ.20ರಂದು ಸೋಮವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ಹಿರಿಯೂರಿನ ಅಕ್ಷಯ ಫುಡ್ ಪಾರ್ಕ್ ರಸ್ತೆಯಲ್ಲಿನ ಶ್ರೀನಿವಾಸ್ ಅವರ ಜೇನು ಕೃಷಿ ತೋಟದಲ್ಲಿ ವಿಶ್ವ ಜೇನು ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ನಿವೃತ್ತ ಕೃಷಿ ನಿರ್ದೇಶಕಿ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷೆ ಸಿ.ಎನ್.ನಂದಿನಿಕುಮಾರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಬೆಂಗಳೂರು ಕೃಷಿ ತಂತ್ರಜ್ಞರ ಸಂಸ್ಥೆ ಉಪಾಧ್ಯಕ್ಷ ಎಂ.ಮಹಂತೇಶಪ್ಪ, ಕಾರ್ಯದರ್ಶಿ ವೀರಣ್ಣ ಕೆ.ಕಮತರ, ಜಂಟಿ ಕೃಷಿ ನಿರ್ದೇಶಕ ಬಿ.ಮಂಜುನಾಥ್, ಕೃಷಿ ತಂತ್ರಜ್ಞರ ಸಂಸ್ಥೆ ಚಿತ್ರದುರ್ಗ ಪ್ರಾದೇಶಿಕ ಘಟಕದ ಅಧ್ಯಕ್ಷ ಜಿ.ಸಿ.ರಂಗಸ್ವಾಮಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಸವಿತಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಟಿ.ರಾಜಣ್ಣ, ಕೃಷಿ ತಂತ್ರಜ್ಞರ ಸಂಸ್ಥೆ ಉಪಾಧ್ಯಕ್ಷ ಕಟ್ಟಾ ಶ್ರೀನಿವಾಸ ರೆಡ್ಡಿ ಭಾಗವಹಿಸುವರು. ಸಮಗ್ರ ಜೇನು ಕೃಷಿ ಕುರಿತು ಎಸ್.ಎಂ.ಶಾಂತವೀರಯ್ಯ, ಸಂಪೂರ್ಣ ಆಹಾರ ಕುರಿತು ಬಿ.ಎಸ್.ಬಸವರಾಜಪ್ಪ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

### ಆರೋಗ್ಯ ಶಿಬಿರ

» **ಚಿತ್ರದುರ್ಗ**

ರೋಟರಿ ಕ್ಲಬ್ ಚಿತ್ರದುರ್ಗ, ಬಸಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದೊಂದಿಗೆ ಮೇ. 19 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1–30 ರವರೆಗೆ ಎಸ್.ಆರ್.ಬಿ.ಎಂ.ಎಸ್. ರೋಟರಿ ಬಾಲಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಕೀಲು, ಮಂಡಿ, ಭುಜದ ನೋವು ತಪಾಸಣೆ ನಡೆಸಲಾಗುವುದು. ಮೂಳೆ ತೊಂದರೆ, ಕೀಲು ಮರುಜೋಡಣೆ, ಹಿಪ್ ಮರುಜೋಡಣೆ, ಬೆನ್ನು ಮೂಳೆ ರೋಗ, ಉಚಿತ ಆಸ್ಥಿ ರಂಧ್ರತೆ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಾಗುವುದು. ಸ್ತ್ರೀ ರೋಗ ತಪಾಸಣೆ ಕೂಡ ಉಚಿತ ಆರೋಗ್ಯ ಶಿಬಿರದಲ್ಲಿರುತ್ತದೆ. ಡಾ.ರವಿ ಹೆಚ್.ರಂಗಾರೆಡ್ಡಿ, ಡಾ.ಚೈತ್ರ ರವಿ ಇವರುಗಳು ಶಿಬಿರದಲ್ಲಿ ತಪಾಸಣೆ ನಡೆಸಲಿರುವರು. ಹೆಚ್ಚಿನ ಮಾಹಿತಿಗಾಗಿ ಮೊ: 7975116428, 8548894444 ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

## ಫಾಸ್ಟ್ ನ್ಯೂಸ್

### ವಿಧಾನ ಪರಿಷತ್ ಚುನಾವಣೆ: ಬಿಜೆಪಿ ಮತಯಾಚನೆ

» ಮೊದಲ ಪುಟದಿಂದ

ಕಾಂಗ್ರೆಸ್ ಪಕ್ಷ ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷ ಮಾಡಿದೆ. ಕೇಂದ್ರ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ರೀತಿಯ ಒಲವನ್ನು ನೀಡಿದ್ದಾರೆ ಇದರಿಂದ ದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಆದರೆ ರಾಜ್ಯ ಸರ್ಕಾರ ಇದನ್ನು ತಿರಸ್ಕಾರ ಮಾಡಿದೆ ಇದರ ಬದಲಿಗೆ ತನ್ನದೆ ಆದ ಶಿಕ್ಷಣ ನೀತಿಯನ್ನು ಜಾರಿ ಮಾಡಲು ಹೊರಟಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯ ಎಸ್.ಸಿ.ಮ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಕಾರಜೋಳ, ಚಿತ್ರದುರ್ಗ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಶೈಲಜ ರೆಡ್ಡಿ, ಮುಖಂಡರಾದ ಶ್ರೀಮತಿ ಶ್ಯಾಮಲ, ವಕ್ತಾರರಾದ ನಾಗರಾಜ್ ಬೇದ್ರೇ, ದಗ್ಗೆ ಶಿವಪ್ರಕಾಶ್ ವಿರೇಶ್ ಉಪಸ್ಥಿತರಿದ್ದರು.

### ಕಣ್ಣಿನ ತಪಾಸಣೆಗೆ ಅತ್ಯಾಧುನಿಕ, ಉತ್ತಮ ತಂತ್ರಜ್ಞಾನವಿರುವ ಉಪಕರಣಗಳ ಪೂರೈಕೆ

» ಮೊದಲ ಪುಟದಿಂದ

ದ್ವಿತಿಯ ಹಂತದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಉಪಕೇಂದ್ರಗಳಲ್ಲಿ ನೇತ್ರಾಧಿಕಾರಿಗಳಿಂದ ಹಾಗೂ ಆರ್‌ಬಿಎಸ್‌ಕೆ (ರಾಷ್ಟ್ರೀಯ ಬಾಲ್ಯಸ್ವಾಸ್ಥ್ಯ ಕಾರ್ಯಕ್ರಮ) ನೇತ್ರಾಧಿಕಾರಿಗಳಿಂದ ಆಶಾ ಕಾರ್ಯಕರ್ತೆಯರು ಪ್ರಾಥಮಿಕ ತಪಾಸಣೆ ವೇಳೆ ಕಣ್ಣಿನ ತೊಂದರೆ ಇರುವವರ ಕಣ್ಣಿನ ತಪಾಸಣೆ ಮಾಡಿ, ದೂರದೃಷ್ಠಿ, ಸಮೀಪ ದೃಷ್ಠಿ ಇರುವವರಿಗೆ ಉಚಿತ ಕನ್ನಡಕ ವಿತರಿಸಲಾಗುತ್ತದೆ. ಕಣ್ಣಿನ ಪೊರೆ ತೊಂದರೆ ಇರುವವರಿಗೆ ಜಿಲ್ಲಾಸ್ಪತ್ರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ, ಎನ್‌ಜಿಓ ಆಸ್ಪತ್ರೆಗಳಲ್ಲಿ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಆಶಾ ಕಿರಣ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಜಿಲ್ಲೆಗೆ ಕಣ್ಣಿನ ತಪಾಸಣೆಗಾಗಿ ಅತ್ಯಾಧುನಿಕ ಉತ್ತಮ ತಂತ್ರಜ್ಞಾನವಿರುವ ಂಣಾಣಂಖಜಜಿಡಿಚಿಥಿಣಂಟಜಣಾಜಡಿ ಹಾಗೂ ಈಣಟಿಜಣ ಉಪಕರಣಗಳನ್ನು ಒದಗಿಸಲಾಗಿದೆ. ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ 17 ಪ್ರಾಥಮಿಕ ನೇತ್ರಾಧಿಕಾರಿಗಳಿಗೆ Handled Auto Rafractomater ನ್ನು ನೀಡಿದ್ದು, ಶೀಘ್ರವಾಗಿ ಕಣ್ಣಿನ ತೊಂದರೆಗಳನ್ನು ಪತ್ತೆಹಚ್ಚಲು ಸಹಕಾರಿಯಾಗಿದೆ. ಅದೇ ರೀತಿ ಜಿಲ್ಲೆಯ ನಾಲ್ಕು ಸಮುದಾಯ ಆರೋಗ್ಯ ಕೇಂದ್ರಗಳಾದ ಸಿರಿಗೆರೆ, ಪರಶುರಾಂಪುರ, ಧರ್ಮಪುರ ಹಾಗೂ ಶ್ರೀರಾಂಪುರ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅತ್ಯಾಧುನಿಕ ತಂತ್ರಜ್ಞಾನವುಳ್ಳ 3 Netra Fundu ಎಂಬ ನಾಲ್ಕು ಉಪಕರಣಗಳನ್ನು ಒದಗಿಸಲಾಗಿದೆ. ಈ ಉಪಕರಣದಿಂದ ಕಣ್ಣಿನ ರೆಟಿನಾದ ನರಗಳ ತೊಂದರೆ Diabeties Retinopathy ಪತ್ತೆ ಹಚ್ಚುವುದು, ಜಿಲ್ಲಾಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಸಾರ್ವಜನಿಕರು ಆಶಾಕಿರಣ ಕಾರ್ಯಕ್ರಮದಲ್ಲಿ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಆಸ್ಪತ್ರೆಗಳಲ್ಲಿ ಕಣ್ಣಿನ ತಪಾಸಣೆ ಮಾಡಿಸಿಕೊಂಡು ಉಚಿತ ಕನ್ನಡಕ ಅಥವಾ ಉಚಿತ ಶಸ್ತ್ರಚಿಕಿತ್ಸೆ ಸೌಲಭ್ಯ ಪಡೆಯಬಹುದು ಎಂದು ಜಿಲ್ಲಾ ಅಂಧತ್ವ ನಿವಾರಣಾ ಕಾರ್ಯಕ್ರಮ ಅಧಿಕಾರಿ ಡಾ.ನಾಗರಾಜ್ ಮನವಿ ಮಾಡಿದ್ದಾರೆ.

### ಪ್ರತಿಭಾ ಪುರಸ್ಕಾರ

» ಚಿತ್ರದುರ್ಗ

2023–24 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಮುಸ್ಲಿಂ ಕಲ್ಚರಲ್ ಅಕಾಡೆಮಿ ರಿ. ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ. ಅರ್ಹ ವಿದ್ಯಾರ್ಥಿಗಳು ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ಅಂಕಪಟ್ಟಿ ನಕಲು ಪ್ರತಿಯೊಂದಿಗೆ ಜೂ.14, 2024 ರ ಒಳಗಾಗಿ ಎಂ.ಹನೀಫ್, ಅಧ್ಯಕ್ಷರು, ಕರ್ನಾಟಕ ಮುಸ್ಲಿಂ ಕಲ್ಚರಲ್ ಅಕಾಡೆಮಿ, ಕಲರ್ಸ ಡಿಜಿಟಲ್, ಪ್ರಸನ್ನ ಟಾಕೀಸ್ ರಸ್ತೆ, ಉಮರ್ ಸರ್ಕಲ್ ಹತ್ತಿರ ಚಿತ್ರದುರ್ಗ ಈ ವಿಳಾಸಕ್ಕೆ ಅರ್ಜಿ ಸಲ್ಲಿಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 7022822417, 7975000808 ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

### ಅಡವಿಚಿಕ್ಕೇನಹಳ್ಳಿ : ಜೂಜಾಟದ ತಂಡದ ಮೇಲೆ ಪೋಲೀಸರ ದಾಳಿ.

» ಚಳ್ಳಕೆರೆ

ತಾಲ್ಲೂಕಿನ ಗೋಪನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಡವಿಚಿಕ್ಕೇನಹಳ್ಳಿ ಗ್ರಾಮದಲ್ಲಿ ಜೂಜಾಟವಾಡುತ್ತಿದ್ದ ತಂಡದ ಮೇಲೆ ದಾಳಿ ನಡೆಸಿದ ಪೊಲೀಸರು 5220ರೂ ನಗದು ಹಣವ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಪಿಎಸ್‌ಐ ಜೆ.ಶಿವರಾಜ್, ಸಾರ್ವಜನಿಕ ಮಾಹಿತಿ ಮೇರೆಗೆ ಉಪವಿಭಾಗದ ಡಿವೈಎಸ್ಪಿ ಮತ್ತು ಠಾಣಾ ವೃತ್ತ ನಿರೀಕ್ಷಕ ಕೆ.ಕುಮಾರ ಮಾರ್ಗದರ್ಶನದಲ್ಲಿ ನಾನು ಹಾಗೂ ಸಿಬ್ಬಂದಿ ವರ್ಗ ಅಡವಿಚಿಕ್ಕೇನಹಳ್ಳಿ ಗ್ರಾಮದ ಬಳಿ ಜೂಜಾಟವಾಡುತ್ತಿದ್ದ ತಂಡದ ಮೇಲೆ ದಾಳಿ ನಡೆಸಿ ದಿನಕರ ಹಾಗೂ ಇತರರನ್ನು ವಶಕ್ಕೆ ಪಡೆದು ಪ್ರಕರಣ ದಾಖಲು ಮಾಡಲಾಗಿದೆ.

# ವಕೀಲರ ಸಹಕಾರ ಪ್ರಧಾನ: ರೇಷ್ಮ ಕಲಕಪ್ಪಗೋಣಿ

» ಚಳ್ಳಕೆರೆ

ಕಳೆದ ಸುಮಾರು ಎರಡು ವರ್ಷಗಳಿಂದ ಇಲ್ಲಿನ ನ್ಯಾಯಾಲಯದಲ್ಲಿ ಹಿರಿಯ ನ್ಯಾಯಾಧೀಶರಾಗಿ ಕಾರ್ಯನಿವರ್ಹಿಸುತ್ತಿದ್ದ ರೇಷ್ಮಕಲಕಪ್ಪಗೋಣಿ ಹಾಗೂ ಗೌಡಜಗದೀಶ್‌ರುದ್ರೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ತಾಲ್ಲೂಕು ವಕೀಲರ ಸಂಘದ ವತಿಯಿಂದ ವಕೀಲರ ಭವನದಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.



ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಹಿರಿಯ ನ್ಯಾಯಾಧೀಶೆ ರೇಷ್ಮಕಲಕಪ್ಪಗೋಣಿ, ನಾವು ಮಾಡುವ ನ್ಯಾಯಾಂಗ ಇಲಾಖೆಯ ಸೇವೆ ಎಲ್ಲರಿಗೂ ಗೌರವವನ್ನುಂಟು ಮಾಡುತ್ತದೆ. ಬೇರೆ ಎಲ್ಲಾ ಇಲಾಖೆಗಿಂತ ಹೆಚ್ಚು ಗೌರವವನ್ನು ಸಂಪಾದಿಸುವುದು ನಮ್ಮ ನ್ಯಾಯಾಂಗ ಇಲಾಖೆ. ಕಳೆದ ಎರಡು ವರ್ಷಗಳಿಂದ ನಾನು ಇಲ್ಲಿ ಸೇವೆ ಮಾಡಿದ್ದು ನನಗೆ ಎಲ್ಲಾ ರೀತಿಯ ಸಹಕಾರವನ್ನು ವಕೀಲರ ವೃಂದ ನೀಡಿದೆ. ವಕೀಲರು ಅಧ್ಯಯನ ಶೀಲರಾದರೆ ಮಾತ್ರ ಉತ್ತಮ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ನ್ಯಾಯಾಂಗದ ಘನತೆ,. ಗೌರವ ಕಾಪಾಡಲು ವಕೀಲರು ಎಲ್ಲಾ ರೀತಿಯ ಸಹಕಾರವನ್ನು ನೀಡಬೇಕು. ಇಲ್ಲಿನ ವಕೀಲರ ಸಂಘದ ಕಾರ್ಯಚಟುವಟಿಕೆಗಳು ಉತ್ತಮವಾಗಿವೆ ಎಂದರು. ಜೆಎಂಎಫ್‌ಸಿ ನ್ಯಾಯಾದೀಶ ಗೌಡಜಗದೀಶರುದ್ರೆ ಮಾತನಾಡಿ, ನ್ಯಾಯಾಂಗ ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದಲ್ಲಿ ವಕೀಲರ ಸಹಕಾರವೇ ಪ್ರಧಾನವಾಗುತ್ತದೆ. ಚಳ್ಳಕೆರೆಯಲ್ಲಿ ನಾವು ಕಾರ್ಯನಿರ್ವಹಿಸಲು ಎಲ್ಲಾ ರೀತಿಯ ಸಹಕಾರ ನಮಗೆ ದೊರಕಿದೆ. ಇಲಾಖೆಯಲ್ಲಿ ವರ್ಗಾವಣೆ ಮಾಮೂಲು ಇಲ್ಲಿನ ಸಹಕಾರ ಮನೋಭಾವನೆ ಎಲ್ಲರಿಗೂ ಮಾರ್ಗದರ್ಶನವಾಗಿದೆ ಎಂದರು.

ಅಪರ ಸಿವಿಲ್ ನ್ಯಾಯಾಧೀಶೆ ಎಚ್.ಆರ್.ಹೇಮಾ ಮಾತನಾಡಿ, ಕಳೆದ ಕೆಲವು ತಿಂಗಳುಗಳಿಂದ ನಾನು ಇಬ್ಬರೂ ನ್ಯಾಯಾಧೀಶರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದೇನೆ. ಹಲವಾರು ಕಾರ್ಯಕ್ರಮಗಳಿಗೂ ಅವರೊಟ್ಟಿಗೆ ಮಾತನಾಡಿದ್ದೇನೆ. ನ್ಯಾಯಾಂಗ ಇಲಾಖೆಯ ಬಗ್ಗೆ ಸಾಕಷ್ಟು ಅನುಭವವನ್ನು ಇಬ್ಬರೂ ನ್ಯಾಯಾಧೀಶರು ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಇನ್ನೂ ಹೆಚ್ಚು ಉತ್ತಮ ಮಟ್ಟತಲುಪಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಕೆ.ಎಂ.ನಾಗರಾಜು ಮಾತನಾಡಿ, ಹಿರಿಯ ನ್ಯಾಯಾಧೀಶೆ ರೇಷ್ಮಕಲಕಪ್ಪಗೋಣಿ ಹಲವಾರು ಸಂದರ್ಭಗಳಲ್ಲಿ ನಮಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ಕಕ್ಷಿದಾರರಿಗೆ ನ್ಯಾಯವನ್ನು ಒದಗಿಸಲು ವಕೀಲರು ಹೆಚ್ಚು ಗಮನಹರಿಸಬೇಕು, ಇಲ್ಲಿ ಆ ಕೆಲಸ ಉತ್ತಮವಾಗಿದೆ.


ಬೆಂಗಳೂರಿಗೆ ವರ್ಗವಾಗಿರುವ ರೇಷ್ಮಕಲಕಪ್ಪಗೋಣಿಯವರು ಇನ್ನೂ ಹೆಚ್ಚು ಖ್ಯಾತಿಗಳಿಸಲಿ ಎಂದು ಶುಭಹಾರೈಸಿದರು. ಗೌಡಜಗದೀಶ್‌ರುದ್ರೆ ಸಹ ಮಂಗಳೂರಿಗೆ ವರ್ಗಾವಣೆಯಾಗಿದ್ದಾರೆ ನ್ಯಾಯಾಂಗ ಇಲಾಖೆ ಹಲವಾರು ಪ್ರಕರಣಗಳ ಬಗ್ಗೆ ವಕೀಲರಿಗೆ ಹೆಚ್ಚು ಮಾರ್ಗದರ್ಶನ ಮಾಡಿದ್ದಾರೆ.ಅವರಸೇವಾಮನೋಭಾವನೆ ಉತ್ತಮಮಟ್ಟದ್ದಾಗಿದೆ ಎಂದರು.

ಉಪಾಧ್ಯಕ್ಷ ಬಿ.ಪಾಲಯ್ಯ, ಕಾರ್ಯದರ್ಶಿ ಎಂ.ಎಸ್.ಸಿದ್ದರಾಜು, ನಿರ್ದೇಶಕರಾದ ಡಿ.ಬಿ.ಬೋರಯ್ಯ, ಶ್ರೀನಿವಾಸ್, ಟಿ.ತಮ್ಮಣ್ಣ, ಎಂ.ಎಸ್.ಜಗದೀಶ್‌ನಾಯಕ, ಜಿ.ಶರಣಪ್ಪಯ್ಯ, ದೊಡ್ಡರಂಗಪ್ಪ, ಜಿ.ಎಂ. ಆನಂದಪ್ಪ, ಕೆ.ಟಿ.ರುದ್ರೇಶ್, ಮಧುಮತಿ, ಶಿಲ್ಪ, ಶ್ಯಾಮಲ ಉಪಸ್ಥಿತರಿದ್ದರು.

# ಬಂಡಿ ಚಿಕ್ಕಮ್ಮ ಜಾತೋತ್ಸವ ಆರಂಭ

» ಎಸ್.ವೇದಮೂರ್ತಿ ಹೊಳಲ್ಕೆರೆ.

ಹೊಳಲ್ಕೆರೆ : ಪಟ್ಟಣದಲ್ಲಿ ನಲೆಸಿರುವ ಐತಿಹಾಸಿಕ ಪ್ರಸಿದ್ಧಿ ಪುರದೇವತೆ ಊರು ಬಾಗಿಲು ಬಂಡಿ ಚಿಕ್ಕಮ್ಮ ದೇವಿ ಸಿಡಿ ಉತ್ಸವ ಆರಂಭಗೊಂಡಿದ್ದು, ಶುಕ್ರವಾರ ಸಿಡಿ ಉತ್ಸವದ ನಂತರ ಮುಕ್ತಾಯಗೊಳ್ಳಲಿದೆ.



ಉತ್ಸವಕ್ಕೆ ಸಿದ್ಧತೆಯನ್ನು ದೇವಸ್ಥಾನದ ಸಮಿತಿಯವರು ಕಳೆದೊಂದು ವಾರದಿಂದ ಕೈಗೊಂಡಿದ್ದಾರೆ. ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ನಿತ್ಯವು ಕುಂಕುಮ, ಹರಿಸಿಣ, ಹೂವಿನ ಅಲಂಗಾರಗಳ ವಿಶೇಷ ಪೂಜಾಧಿಗಳನ್ನು ಕೈಗೊಳ್ಳಲಾಗಿದೆ. ದೇವಸ್ಥಾನದ ಸುತ್ತಲು ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

ನಿತ್ಯ ಸಂಜೆ ಹೂವಿನ ಪಲ್ಲಕ್ಕಿ ಉತ್ಸವದ ಮೆರವಣಿಗೆಯನ್ನು ಪಟ್ಟಣದ ರಾಜಬೀದಿ ಕೈಗೊಳ್ಳಲಾಗುತ್ತದೆ. ಮೆರವಣಿಗೆಯಲ್ಲಿ ದೇವಿ ಕುರಿತ ಅಸಾಧಿ ಪದ ಹಾಳುಗಳನ್ನು ಹಾಡಲಾಗುತ್ತಿದೆ. ಜತೆ ಯುವಕರು ಸೋಮನ ಕುಣಿತ, ಮಣೆ ಆಟದ ಕುಣಿತ,ವಿವಿಧಜಾನಪದಕುಣಿತದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಗುರುವಾರ ದೇವಸ್ಥಾನದ ಆವರಣದಲ್ಲಿ ಎಡೆ ಪಲಹಾರ ಸೇವೆ ನಡೆಯಲಿದೆ. ಸಾವಿರಾರು ಭಕ್ತರು ಪಾಲ್ಗೊಂಡು ಎಡೆ ಪ್ರಸಾದ ಸ್ವೀಕರಿಸಲಿದ್ದಾರೆ. ಶುಕ್ರವಾರ ಸಿಡಿ ಉತ್ಸವ ಇದ್ದು, ವೇಣುಗೋಪಾಲಸ್ವಾಮಿ ದೇವಸ್ಥಾನದಿಂದ ಸಿಡಿ ಕಂಬ ತಂದು ಎಣ್ಣೆ, ಅರಿಷಿಣ, ಕುಂಕುಮ ಮಿಶ್ರಣ ಕಂಬಕ್ಕೆ ಬಳಿದು ವಿಶೇಷ ಪೂಜೆ ಸಲ್ಲಿಸಿ, ಬಾಹುಟ ಹರಾಜು, ಎಡೆ ಸೇವೆ ಬಳಿಕ ಸಂಜೆ 5 ರಿಂದ 6 ಗಂಟೆಯ ಒತ್ತಿಗೆ ಸಿಡಿ ಉತ್ಸವ ನಡೆಯಲಿದೆ.

ಉತ್ಸವದ ಅಂಗವಾಗಿ ಪಟ್ಟಣದ ಕೋಟೆ ಭಾಗದಲ್ಲಿ ಹಬ್ಬದ ವಾತವರಣ ಇದ್ದು, ಹೆಣ್ಣು ಮಕ್ಕಳು ವಿಶೇಷ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗಾಗಿ ಹರಿಕೆ ಕಟ್ಟಿಕೊಳ್ಳುತ್ತಾರೆ. ರೈತರು ಉತ್ತಮ ಮಳೆ, ಬೆಳೆ, ಜನ ಜಾನುವಾರುಗಳಿಗೆ ಆರೋಗ್ಯ ನೀಡುವಂತೆ ಪ್ರಾರ್ಥಿಸುತ್ತಾರೆ.

ಜಾತೋತ್ಸವದ ಎಲ್ಲಾ ಸಿದ್ಧತೆಯನ್ನು ದೇವಸ್ಥಾನ ಸಮಿತಿ ಮುಖಂಡರು, ಯುವಕರು, ಕೋಟೆ ನಾಗರಿಕರು ಕೈಗೊಳ್ಳುತ್ತಿದ್ದಾರೆ.

# ಯೋಗ, ಪ್ರಾಣಾಯಾಮ ಕುರಿತು ಮಾಹಿತಿ



» ಚಿತ್ರದುರ್ಗ

ಪತಂಜಲಿ ಯೋಗ ಸಮಿತಿ ರಾಜ್ಯ ಪ್ರಭಾರಿ ಮಹಿಳಾ ಅಧ್ಯಕ್ಷರಾದ ಆರತಿ ಮತ್ತು ವಿಭಾಗೀಯ ಮಟ್ಟದ ಪದಾಧಿಕಾರಿ ಜ್ಯೋತಿ ಅವರು ಚಿತ್ರದುರ್ಗ ನಗರಕ್ಕೆ ಮಂಗಳವಾರ ಭೇಟಿ ನೀಡಿದರು.

ಚಿತ್ರದುರ್ಗ ನಗರದ ಜಿಲ್ಲಾ ಕ್ರೀಡಾಂಗಣದ ರಸ್ತೆಯ ವೀರಸೌಧದ ಆವರಣದಲ್ಲಿ ಹಮ್ಮಿಕೊಂಡಿದ್ದ ಯೋಗಾಸನ ಕಾರ್ಯಕ್ರಮದಲ್ಲಿ ಯೋಗ ಹಾಗೂ ಪ್ರಾಣಾಯಾಮದ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪತಂಜಲಿ ಯೋಗ ಸಮಿತಿ ಜಿಲ್ಲಾ ಮಹಿಳಾ ಅಧ್ಯಕ್ಷರಾದ ಹೇಮಮೂರ್ತಿ, ಶೋಭಾ, ಜೀವಿತಾ, ನಾಗೇಶಣ್ಣ, ಲವಕುಮಾರ್, ಶಂಕರಪ್ಪ ಹಾಗೂ ಕಿಸಾನ್ ಸಂಘಟನೆಯ ಅಧ್ಯಕ್ಷ ಕೆಂಚವೀರಪ್ಪ, ಜಿಲ್ಲಾ ಅಧ್ಯಕ್ಷರಾದ ದೇವಾನಂದ ನಾಯ್ಕ್, ಕಾರ್ಯದರ್ಶಿ ಗುರುಮೂರ್ತಿ, ಖಜಾಂಚಿ ಹಾಗೂ ಯುವ ಪ್ರಭಾರೆ ಅಧ್ಯಕ್ಷ ನವೀನ್ ಹಾಗೂ ಇತರೆ ಪದಾಧಿಕಾರಿಗಳು ಇದ್ದರು.

# ಬೊಮ್ಮಸಮುದ್ರ ಗ್ರಾಮದ ಕೆರೆ ಮರಳು ಅಕ್ರಮ ಸಾಗಾಟ

» ಚಳ್ಳಕೆರೆ

ನಗರಕ್ಕೆ ಕೂಗಳತೆ ದೂರದಲ್ಲಿರುವ ಬೊಮ್ಮಸಮುದ್ರ ಗ್ರಾಮದ ಕೆರೆಯಂಗಳದಲ್ಲಿ ಪ್ರತಿನಿತ್ಯವೂ ಎತ್ತಿನಗಾಡಿಯ ಮೂಲಕ ಅಕ್ರಮ ಮರಳು ಸಾಗಾಟದ ಬಗ್ಗೆ ನಿರಂತರ ದೂರು ಬಂದ ಹಿನ್ನೆಲೆಯಲ್ಲಿ ಪೊಲೀಸ್ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಠಾಣಾ ಇನ್‌ಸ್ಪೆಕ್ಟರ್ ಕೆ.ಕುಮಾರ್ ಸಿಬ್ಬಂದಿ ವರ್ಗ ಕೆರೆಯಲ್ಲಿ ಅಕ್ರಮವಾಗಿ ಮರಳು ತುಂಬಲು ಮಾಡಿದ್ದ ಗುಂಡಿಗಳನ್ನು ಮುಚ್ಚಿ, ಕೆರೆ ಪ್ರವೇಶಿಸದಂತೆ ದಾರಿಗಳಿಗೆ ಟ್ರಂಚ್ ಹೊಡೆಸಿದರು.



ತಾಲ್ಲೂಕಿನ ಬೊಮ್ಮಸಮುದ್ರ ಗ್ರಾಮ ನಗರಕ್ಕೆ ನಾಲ್ಕೈದು ಕಿ.ಮೀ ದೂರದ ಗ್ರಾಮ. ಆದರೂ ಸಹ ಈ ಗ್ರಾಮದ ಕೆರೆಯಲ್ಲಿ ಅಕ್ರಮ ಮರಳು ದಂಧೆ ಮಾತ್ರ ನಿಂತಿಲ್ಲ. ಕೆರೆ ರಕ್ಷಿಸಲು ಕೆರೆ ಸಂರಕ್ಷಣಾ ಸಮಿತಿ ರಚನೆ ಮಾಡಿಕೊಂಡಿದ್ದರೂ ಸಹ ಕೆರೆಯನ್ನು ಮರಳು ಕಳ್ಳರಿಂದ ರಕ್ಷಣೆ ಸಂಪೂರ್ಣ ಸಾಧ್ಯವಾಗಿರಲಿಲ್ಲ. ಪೊಲೀಸ್ ಹಾಗೂ ಕೆರೆ ಸಂರಕ್ಷಣಾ ಸಮಿತಿಯ ಕಣ್ಣು ತಪ್ಪಿಸಿ ಪ್ರತಿನಿತ್ಯ ಮುಂಜಾನೆಯೇ ಮರಳು ದಂಧೆ ಪ್ರಾರಂಭವಾಗುತ್ತಿತ್ತು.ಕೆರೆಯ ಒಡಲಿನಲ್ಲಿ ಬೃಹತ್ ಗುಡಿಗಳನ್ನು ಬಗೆದು ಎತ್ತಿನ ಗಾಡಿಗೆ ತುಂಬಿಕೊಂಡು ನಗರಕ್ಕೆ ಸಾಗಾಟ ಮಾಡುತ್ತಿದ್ದರು, ಇದೇ ದಂಧೆ ಪ್ರತಿನಿತ್ಯವೂ ನಡೆಯುತ್ತಿತ್ತು. ಈ ಬಗ್ಗೆ ಸಾರ್ವಜನಿಕರು ಹಲವಾರು ಬಾರಿ ಪೊಲೀಸ್ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಅಧಿಕಾರಿಗಳು ಕ್ರಮವಹಿಸಿ ಸುಮ್ಮನಾಗುತ್ತಿದ್ದರು.

ಈ ಬಾರಿ ಕೆರೆಯನ್ನು ರಕ್ಷಣೆ ಮಾಡಲು ಠಾಣಾ ಇನ್‌ಸ್ಪೆಕ್ಟರ್ ಕೆ.ಕುಮಾರ್ ದೃಢನಿರ್ಧಾರ ಮಾಡಿ ಮರಳು ತುಂಬುವ ಗುಂಡಿಗಳನ್ನು ಜೆಸಿಬಿ ಮೂಲಕ ಮುಚ್ಚಿಸಿದ್ದಾರೆ, ಮರಳು ಸಾಗಾಟ ಮಾಡಲು ಮಾಡಿಕೊಂಡಿದ್ದ ಎಲ್ಲಾ ರಸ್ತೆಗಳನ್ನು ಮುಚ್ಚಿಸಿ ಯಾರೂ ಕೆರೆಯ ಒಳಗೆ ಪ್ರವೇಶ ಮಾಡದಂತೆ ಮುನ್ನೆಚ್ಚರಿಕೆ ವಹಿಸಿದ್ದಾರೆ.

ಈ ಬಗ್ಗೆ ಎಚ್ಚರಿಕೆ ನೀಡಿರುವ ಠಾಣಾ ಇನ್‌ಸ್ಪೆಕ್ಟರ್ ಕೆ.ಕುಮಾರ್, ಹಲವಾರು ಬಾರಿ ಕೆರೆಯ ಮರಳು ದಂಧೆಯ ಬಗ್ಗೆ ಆರೋಪಗಳು ಕೇಳಿ ಬಂದಿದ್ದವು. ಗ್ರಾಮಸ್ಥರು ಸಹ ಅಕ್ರಮ ಮರಳು ಸಾಗಾಟದಿಂದ ಅಂತರ್ಜಲ ಬತ್ತಿದ ಕೃಷಿ ಚಟುವಟಿಕೆ ಸಂಪೂರ್ಣ ಸ್ಥಗಿತವಾದ ಬಗ್ಗೆಯೂ ದೂರು ನೀಡಿದ್ದರು.

ಅವರ ಮಾಹಿತಿ ಮೇರೆ ಮರಳು ದಂದೆ ಮಾಡುವಎತ್ತಿನಗಾಡಿಗಳನ್ನುಠಾಣೆಗೆತರೆತಂದುಕ ಎಚ್ಚರಿಕೆ ನೀಡಲಾಗಿದೆ. ಅಕ್ರಮ ಮರಳು ಸಾಗಾಟದ ಬಗ್ಗೆ ಎಲ್ಲಾದರೂ ಕಂಡುಬಂದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ವಿದ್ಯುತ್ ತಂತಿ ತಗಲಿ ಬಾಲಕ ಸಾವು

» ಹೊಸದುರ್ಗ

ಜಮೀನಿನಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ತಗಲಿ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ತಾಲೂಕಿನ ಶ್ರೀರಾಂಪುರ ಹೋಬಳಿಯ ಕಬ್ಬಳ ಗ್ರಾಮದಲ್ಲಿ ಮಂಗಳವಾರ ನೆಡೆದಿದೆ. ತಾಲೂಕಿನ ಶ್ರೀರಾಂಪುರ ಹೋಬಳಿ ಕಬ್ಬಳ ಗ್ರಾಮದ ಸವಿತ ರಂಗಸ್ವಾಮಿ ಪುತ್ರ ವೆಂಕಟೇಶಮೂರ್ತಿ (5) ಮೃತ ದುರ್ದೈವಿ. ಘಟನೆ ವಿವರ : ಕಬ್ಬಳ ಗ್ರಾಮದ ರಂಗಸ್ವಾಮಿ ಎಂಬುವವರ ಜಮೀನಿನ ಮಧ್ಯೆ ಇದೇ ಗ್ರಾಮದ ಸಣ್ಣರಂಗಪ್ಪ ಎಂಬುವವರು ತಮ್ಮ ತೋಟದ ಮನೆಗೆ ನಿರಂತರ ಜ್ಯೋತಿ ಸಂಪರ್ಕಕ್ಕಾಗಿ ಯಾವುದೇ ಮುಂಜಾಗೃತ ಕ್ರಮ ಕೈಗೊಳ್ಳದೆ ವಿದ್ಯುತ್ ವೈಯರ್ ಎಳೆಯಲಾಗಿತ್ತು. ಕಳೆದ ಒಂದು ತಿಂಗಳಿಂದ ವೈರ್ ನೆಲಕ್ಕೆ ತಾಗುವಂತೆ ಕೆಳಕ್ಕೆ ಬಿದ್ದಿತ್ತು. ಮಂಗಳವಾರ ತನ್ನ ತಾಯಿಯ ಜೊತೆ ತೋಟಕ್ಕೆ ಹೋಗಿದ್ದ ಬಾಲಕ ತೆಂಗಿನ ಗರಿಯನ್ನು ಎಳೆಯುವಾಗ ವಿದ್ಯುತ್ ತಂತಿ ವೆಂಕಟೇಶಮೂರ್ತಿಗೆ ತಗುಲಿ ಗಂಭೀರ ಗಾಯಗಳಾಗಿದ್ದವು ಗಾಯಾಳುವನ್ನು ಚಿಕಿತ್ಸೆಗಾಗಿ ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ತಿಳಿದುಬಂದಿದ್ದು ಈ ಬಗ್ಗೆ ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪ್ರಮುಖ ಸುದ್ದಿ

# ನ್ಯಾಯಾಲಯ ನೊಂದವರಿಗೆ ಬೆಳಕಾಗುವ ದೇವಾಲಯವಾಗಬೇಕು

» ಹೊಸದುರ್ಗ

ಹಲವಾರು ವರ್ಷಗಳಿಂದ ಹಾಗೆಯೇ ಇದ್ದ ಹಲವು ಪ್ರಕರಣಗಳನ್ನು 3 ವರ್ಷಗಳಲ್ಲಿ ಇತ್ಯರ್ಥ ಪಡಿಸುವ ಪ್ರಯತ್ನ ಮಾಡಿದ್ದೇವೆ. ನ್ಯಾಯಾಲಯ ನೊಂದವರ ಬಾಳಿಗೆ ಬೆಳಕು ನೀಡುವ ದೇವಾಲಯವಾಗಬೇಕು. ಆದಾಗ, ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನರಿಗೆ ಮತ್ತಷ್ಟು ನಂಬಿಕೆ ಮತ್ತು ವಿಶ್ವಾಸ ಮೂಡುತ್ತದೆ. ಈ ನಿಟ್ಟಿನಲ್ಲಿ ನ್ಯಾಯಾಧೀಶರಾದನಾವುಗಳುವಕೀಲರಾದ ನೀವುಗಳು ಕೆಲಸ ಮಾಡೋಣವೆಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಂ.ಎಸ್.ಶಶಿಕಲಾ ಸಲಹೆ ನೀಡಿದರು.



ಪಟ್ಟಣದ ನ್ಯಾಯಾಲಯದ ಸಭಾಂಗಣದಲ್ಲಿ ಬುಧವಾರ ತಾಲೂಕು ವಕೀಲರ ಸಂಘದ ವತಿಯಿಂದ ವರ್ಗಾವಣೆಗೊಂಡ ನ್ಯಾಯಾಧೀಶರಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ವಕೀಲರಿಂದ ಗೌರವ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿ, ಪ್ರತಿಯೊಬ್ಬ ವಕೀಲರು ಕೂಡ ವೃತ್ತಿ ಗೌರವ ಕಾಪಾಡಿಕೊಳ್ಳಬೇಕು.ನಾನುನಿಮ್ಮೊಂದಿಗೆಲ್ಲಾ ಕರ್ತವ್ಯ ನಿರ್ವಹಿಸಿರುವುದು ನೆಮ್ಮದಿ ಮತ್ತು ಸಂತೋಷ ನೀಡಿದೆ. ಯಾವುದೇ ವ್ಯಕ್ತಿಯನ್ನು ಗುರಿಯಾಗಿಸಿಕೊಂಡು ನ್ಯಾಯಾಧೀಶರಾದ ನಾವು ತೀರ್ಪು ನೀಡುವುದಿಲ್ಲ. ಎಲ್ಲಾ ವಕೀಲರು ಮತ್ತು ಸಿಬ್ಬಂದಿಗಳು ನಮಗೆ ಬಹಳ ಸಹಕಾರ ನೀಡಿದ್ದಾರೆ. ಇದನ್ನು ನಾನು ಎಂದಿಗೂ ಮರೆಯುವುದಿಲ್ಲ. ಕಿರಿಯ ವಕೀಲರು ಹಿರಿಯ ವಕೀಲರ ಮಾರ್ಗ ದರ್ಶನ ಮತ್ತು ಸಲಹೆ ಪಡೆದು ಕೆಲಸ ಮಾಡಿ. ನಿಮ್ಮೆಲ್ಲರ ನಡುವೆ ಸ್ನೇಹ, ಸಹಕಾರ ಮತ್ತು ಹೊಂದಾಣಿಕೆ ಈಗೆಯೇ ಇರಲಿ ಎಂದು ಹೇಳಿದರು.ಇದೇ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿ ವರ್ಗಾವಣೆಗೊಂಡ ಮತ್ತೊಬ್ಬ ನ್ಯಾ. ಶಿವರಾಜು ಮಾತನಾಡಿದರು. ನ್ಯಾ. ತ್ರಿನೇತ್ರ ಮತ್ತು ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ರವಿಕುಮಾರ್ ಸೇರಿದಂತೆ ವಕೀಲರ ಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು ಮತ್ತು ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

## ಫಾಸ್ಟ್ ನ್ಯೂಸ್

### ಯುವಕ, ಅನಾಮಧೇಯ ಶವ ಪತ್ತೆಗೆ ಮನವಿ

» **ಚಿತ್ರದುರ್ಗ**

ನಗರದ ಕೋಟೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಯುವಕ ಕಾಣೆಯಾದ ಹಾಗೂ ಅನಾಮಧೇಯ ಶವ ದೊರೆತ ಬಗ್ಗೆ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿವೆ. ನಗರದ ಕೋಟೆ ಬಡಾವಣೆಯ ಪುನೀತ್ ತಂದೆ ಲೇಟ್ ರಮೇಶ್ (21 ವರ್ಷ) ಕಾಣೆಯಾಗಿದ್ದಾನೆ. ಈ ಕುರಿತು ಮೇ.2 ರಂದು ಪ್ರಕರಣ ದಾಖಲಿಸಲಾಗಿದೆ. ಪುನೀತ್ ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ದುಂಡುಮುಖ, ಸುಮಾರು 6 ಅಡಿ ಎತ್ತರವಿದ್ದು, ತಲೆಯ ಬಲಭಾಗದಲ್ಲಿ ಹಳೆಯಗಾಯದ ಗುರುತು ಇದೆ, ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾನೆ. ಮನೆಯಿಂದ ಹೋಗುವಾಗ ಬ್ಲೂ ಕಲರ್ ಜೀನ್ಸ್ ಪ್ಯಾಂಟ್, ಬ್ಲೂ ಕಲರ್ ವೈಟ್ ಮಿಕ್ಸ್ ಚೆಕ್ಸ್ ಶರ್ಟ್ ಧರಿಸಿರುತ್ತಾನೆ. ನಗರದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಶೌಚಾಲಯ ಪಕ್ಕದಲ್ಲಿ ಸುಮಾರು 60–70 ವರ್ಷದ ಅನಾಮಧೇಯ ವ್ಯಕ್ತಿಯ ಶವ ಪತ್ತೆಯಾಗಿದೆ. ಈ ಕುರಿತು ಮೇ.15 ರಂದು ನಗರದ ಕೋಟೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿಯು ಎಣ್ಣೆಗೆಂಪು ಮೈಬಣ್ಣ, ಕೋಲುಮುಖ, ಸಾಧಾರಣ ಮೈಕಟ್ಟು ಹೊಂದಿದ್ದು, ಸು.5.3 ಅಡಿ ಎತ್ತರ, ತಲೆಯಲ್ಲಿ 2 ಇಂಚು ಉದ್ದ ಬಿಳಿ ಕೂದಲು, ಮುಖದಲ್ಲಿ ಬಿಳಿ ಗಡ್ಡ ಹೊಂದಿರುತ್ತಾನೆ. ಮೈಮೇಲೆ ಬಿಳಿ ಬಣ್ಣದ ಕಪ್ಪು ಗೆರೆಯುಳ್ಳ ತೋಳಿನ ಶರ್ಟ್, ಕಪ್ಪು ಬಣ್ಣದ ಡ್ರಾಯರ್, ಕೆಂಪು ಬಣ್ಣದ ಉಡಿದಾರ ಧರಿಸಿರುತ್ತಾರೆ. ಮೃತ ವ್ಯಕ್ತಿಯ ವಾರಸುದಾರರು ಪತ್ತೆಯಾಗದ ಕಾರಣ ಶವವನ್ನು ಜಿಲ್ಲಾಸ್ಪತ್ರೆಯ ಶವಾಗಾರ ಕೊಠಡಿಯ ಶೈಥ್ಯಾಗಾರದಲ್ಲಿರಿಸಲಾಗಿದೆ. ಯುವಕನ ಹಾಗೂ ಮೃತ ವೃದ್ಧ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ, ಕೋಟೆ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ದ್ಯೂ: 08194–222933, 9480803145, ಚಿತ್ರದುರ್ಗ ಉಪವಿಭಾಗ ಪೊಲೀಸ್ ಉಪಾಧೀಕ್ಷಕರ ದೂರವಾಣಿ ಸಂಖ್ಯೆ 08194–222430, 9480803120, ಚಿತ್ರದುರ್ಗ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ: 08194–222782 ಗೆ ಸಂಪರ್ಕಿಸಬಹುದು.

### ವಿದ್ಯುತ್ ವ್ಯತ್ಯಯ

» **ದಾವಣಗೆರೆ**

66/11 ಕೆ.ವಿ ದಾವಣಗೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್–2 ಎಂ.ಸಿ.ಸಿ.ಬಿ, ಫೀಡರ್‌ನಲ್ಲಿ ದಾವಣಗೆರೆ ನಗರದ ಮಹಾನಗರ ಪಾಲಿಕೆವತಿಯಿಂದ ಒಳಚರಂಡಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುವುದರಿಂದ ಮೇ.17 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಎಮ್.ಸಿ.ಸಿ.ಬಿ ಎಫ್2 ಫೀಡರ್ ವ್ಯಾಪ್ತಿಯ ಸಿದ್ದವೀರಪ್ಪ ಬಡಾವಣೆಯ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ಮತದಾನ ಕೇಂದ್ರಗಳ ಪಟ್ಟಿ ಪ್ರಕಟ

» **ಚಿತ್ರದುರ್ಗ**

ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆಗೆ ಜೂನ್ 03ರಂದು ಮತದಾನ ಜರುಗಲಿದೆ. ಮತದಾನ ಸಂಬಂಧ ಚಿತ್ರದುರ್ಗ ಜಿಲ್ಲೆಯ ಮತದಾನ ಕೇಂದ್ರಗಳ ಪಟ್ಟಿಯನ್ನು ಆಗ್ನೇಯ ಶಿಕ್ಷಕರ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಗುರುವಾರ ಪ್ರಕಟಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ–2024ರ ಸಂಬಂಧ ಹಮ್ಮಿಕೊಂಡಿದ್ದ ರಾಜಕೀಯ ಪಕ್ಷಗಳ ಮುಖಂಡರ ಸಭೆಯಲ್ಲಿ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣಾಧಿಕಾರಿಗಳು ಹಾಗೂ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಅನುಮೋದಿಸಿರುವ ಮತದಾನ ಕೇಂದ್ರಗಳ ಅನುಮೋದಿತ ಪಟ್ಟಿಯನ್ನು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಪ್ರಕಟಿಸಿದರು.

ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 7 ಮತದಾನ ಕೇಂದ್ರಗಳಿವೆ. ಮೊಳಕಾಲ್ಮುರು ತಾಲ್ಲೂಕಿನ ಶಿಕ್ಷಕ ಮತದಾರರು ಮೊಳಕಾಲ್ಮುರು ಪಟ್ಟಣದ



ತಾಲ್ಲೂಕು ಆಡಳಿತ ಸೌಧದ ಮತದಾನ ಕೇಂದ್ರದಲ್ಲಿ ಮತ ಚಲಾಯಿಸಬಹುದು. ಚಳ್ಳಕೆರೆ ತಾಲ್ಲೂಕಿನ ಶಿಕ್ಷಕ ಮತದಾರರು ಚಳ್ಳಕೆರೆ ನಗರದ ಬಿ.ಎಂ.ಜಿ.ಹೆಚ್. ಎಸ್ ಶಾಲೆ, ಚಿತ್ರದುರ್ಗ ತಾಲ್ಲೂಕಿನ ಶಿಕ್ಷಕ ಮತದಾರರು ಚಿತ್ರದುರ್ಗ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಕೊಠಡಿ ಸಂಖ್ಯೆ–01 ಮತ್ತು ಕೊಠಡಿ ಸಂಖ್ಯೆ–02ರ ಮತದಾನ ಕೇಂದ್ರದಲ್ಲಿ ಮತ ಚಲಾಯಿಸಬಹುದು. ಹಿರಿಯೂರು ತಾಲ್ಲೂಕಿನ ಶಿಕ್ಷಕ ಮತದಾರರು ಹಿರಿಯೂರು ನಗರದ ತಾಲ್ಲೂಕು ಆಡಳಿತ ಸೌಧ, ಹೊಸದುರ್ಗ ತಾಲ್ಲೂಕಿನ ಶಿಕ್ಷಕ ಮತದಾರರು ಹೊಸದುರ್ಗ ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣ ಹಾಗೂ ಹೊಳಲ್ಕೆರೆ ತಾಲ್ಲೂಕಿನ ಶಿಕ್ಷಕ ಮತದಾರರು ಹೊಳಲ್ಕೆರೆ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಉರ್ದು ಶಾಲೆಯ ಮತದಾನ ಕೇಂದ್ರದಲ್ಲಿ ಮತ ಚಲಾಯಿಸಬಹುದಾಗಿದೆ.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಹಾಗೂ ಆಗ್ನೇಯ ಶಿಕ್ಷಕರ ಕ್ಷೇತ್ರದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಶಿಕ್ಷಕ ಮತದಾರರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದು ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈಗಾಗಲೇ ಕೋರಿಯರ್ ಸರ್ವಿಸ್‌ನವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ಪಕ್ಷದವರು ಶಿಕ್ಷಕ ಮತದಾರರಿಗೆ ಉಚಿತ ಉಡುಗೊರೆಗಳನ್ನು ಕೋರಿಯರ್, ಪಾರ್ಸೆಲ್ ಕಳುಹಿಸುವುದು ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದ ಅವರು, ಉಚಿತ ಉಡುಗೊರೆಗಳನ್ನು ಸ್ವೀಕರಿಸುವುದು ಸಹ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಜತೆಗೆ ಸಂಬಂಧಪಟ್ಟವರ ವಿರುದ್ಧ ಅಮಾನತಿಗೆ ಆದೇಶ ಮಾಡಲಾಗುವುದು ಎಂದು ಹೇಳಿದರು. ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ 4615 ಶಿಕ್ಷಕ ಮತದಾರರು ಇದ್ದು, ಕಡ್ಡಾಯವಾಗಿ ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸರಿಯಾದ ವಿಧಾನ ಹಾಗೂ ಸರಿಯಾದ ಕ್ರಮದಲ್ಲಿ ಮತದಾನ ಮಾಡಬೇಕು. ಶಿಕ್ಷಕ ಮತದಾರರು ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ವರ್ತಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ನಾಸಿರುದ್ದೀನ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟಸ್ವಾಮಿ, ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಡಿ.ಎನ್.ಮೈಲಾರಪ್ಪ, ಜೆಡಿಎಸ್ ಮಹಾ ಪ್ರಧಾನ ಕಾರ್ಯದರ್ಶಿ ಡಿ.ಗೋಪಾಲಸ್ವಾಮಿ ನಾಯಕ, ಸಿಪಿಐ(ಎಂ) ಡಿಓಸಿ ಸಿ.ಕೆ.ಗೌಸ್‌ಪೀರ್, ಸಿಪಿಐ ಜಿ.ಸಿ.ಸುರೇಶ್ ಬಾಬು, ಬಿಜೆಪಿಯ ಟಿ.ಯಶವಂತ್ ಕುಮಾರ್ ಇದ್ದರು.

## ಮರುಣನಿಗಾಗಿ ಕತ್ತೆ ಮದುವೆ ಮಾಡಿಸಿದ ಗ್ರಾಮಸ್ಥರು

» **ಹೊಸದುರ್ಗ**

ತಾಲ್ಲೂಕಿನ ಕಸಬಾ ಹೋಬಳಿಯ ರಂಗೈನೂರು ಗ್ರಾಮದಲ್ಲಿ ಮಳೆಗಾಗಿ ಪ್ರಾರ್ಥಿಸಿ, ಶಾಸ್ತ್ರೋಕ್ತವಾಗಿ ಕತ್ತೆಗಳ ಮದುವೆ ಮಾಡಿ, ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಮದುವೆ ಮನೆ ವಾತಾವರಣವೇ ನಿರ್ಮಾಣವಾದಂತಿತ್ತು.

ಗ್ರಾಮದ ಕಟ್ಟೇರಂಗನಾಥ ಸ್ವಾಮಿ ದೇವಾಲಯದಲ್ಲಿ ಬೆಳಿಗ್ಗೆ ಚಪ್ಪರ ಹಾಕಲಾಯಿತು. ಎರಡು ಕತ್ತೆ (ಗಂಡು, ಹೆಣ್ಣು) ತಂದು, ಮದು ಮಕ್ಕಳು ರೀತಿಯಲ್ಲಿ ಅಲಂಕರಿಸಲಾಯಿತು. ನಂತರ ಊರಿನ ಹೆಬ್ಬಾಗಿಲಿನಲ್ಲಿ ಎದುರು ಅಕ್ಕಿ ಶಾಸ್ತ್ರ ಮಾಡಿದ ನಂತರ, ಕತ್ತೆಗಳನ್ನು ದೇವಾಲಯದ ಬಳಿ ಕರೆತಂದು, ವಿವಿಧ ಶಾಸ್ತ್ರಗಳನ್ನು ನೇರವೇರಿಸಿದರು. ಪೂಜಾರಿಯವರು ಮಾಂಗಲ್ಯ ಧಾರಣೆ ನಡೆಸಿಕೊಟ್ಟರು. ಆರತಕ್ಷತೆ ಸಮಯದಲ್ಲಿ ಗ್ರಾಮಸ್ಥರು ಉಡುಗೊರೆಗಳನ್ನು ಸಹ ನೀಡಿದರು. ಮದುವೆಗೆ ಬಂದ ಜನರಿಗೆಲ್ಲಾ ದೇವಾಲಯದ



ಸಮೀಪ ಮುದ್ದೆ ಊಟ ಏರ್ಪಡಿಸಲಾಗಿತ್ತು.

ಮಳೆ ಬಾರದಿದ್ದರೆ, ಗ್ರಾಮಸ್ಥರೆಲ್ಲಾ ಸೇರಿ ಈ ಕಾರ್ಯ ಮಾಡುತ್ತೇವೆ. ಹಿಂದಿನಿಂದಲೂ ಈ ಪದ್ಧತಿ ಜಾರಿಯಲ್ಲಿದೆ. ಕಳೆದ ಐದು ವರ್ಷಗಳಲ್ಲಿ ಉತ್ತಮ ಮಳೆಯಾಗಿದ್ದರಿಂದ ಕತ್ತೆ ಮದುವೆ ಮಾಡಿರಲಿಲ್ಲ. ಕಳೆದ ಒಂದು ತಿಂಗಳಿನಿಂದಲೂ ಸುತ್ತ ಮುತ್ತ ಮಳೆಯಾಗುವುದನ್ನು ಕೇಳಿದ್ದೆವು. ಆದರೆ ನಮ್ಮೂರಿನಲ್ಲಿ ಮಾತ್ರ ಮಳೆಯಾಗುತ್ತಿರಲಿಲ್ಲ. ಕತ್ತೆ ಮದುವೆ ಮಾಡಿ, ಊರಿನ ತುಂಬಾ ಮೆರವಣಿಗೆ ಮಾಡಿದ ನಂತರ ಭಾನುವಾರ ಇಡೀ ರಾತ್ರಿ ಭರ್ಜರಿ ಮಳೆಯಾಗಿದೆ ಎಂದು ಗ್ರಾಮಸ್ಥ ವಸಂತ್ ಸಂತಸ ವ್ಯಕ್ತಪಡಿಸಿದರು.

ಈ ಸಂಧರ್ಬದಲ್ಲಿ ಪಂಚಾಯಿತಿ ಪರಮೇಶ್ವರಪ್ಪ, ಚೇರಮೆನ್ ಚಂದ್ರಪ್ಪ, ಸಣ್ಣಪ್ಪ, ಪೂಜಾರಿ ಚಂದ್ರಪ್ಪ, ಗೌಡ್ರು ನಾಗರಾಜಪ್ಪ, ತಿಪ್ಪೇಶಪ್ಪ, ಜಗದೀಶ್, ರಂಗಪ್ಪ, ಹೇಮಾವತಿ, ಮಂಜುಳಾ, ಕರಿಯಮ್ಮ, ಚಿಕ್ಕಮ್ಮ ಸೇರಿದಂತೆ ಗ್ರಾಮಸ್ಥರೆಲ್ಲಾ ಒಟ್ಟಾಗಿ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## ಚಿಕ್ಕಮ್ಮನಹಳ್ಳಿ: ನೀರಿನ ಸಮಸ್ಯೆಯನ್ನು ಬಗೆಹರಿಸಿದ ತಹಶೀಲ್ದಾರ್



» **ಚಳ್ಳಕೆರೆ**

ಸಕಾಲದಲ್ಲಿ ಮಳೆಬಾರದೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ತಾತ್ಕಾಲಿಕವಾಗಿ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಈ ಬಗ್ಗೆ ತುರ್ತು ಕ್ರಮ ಕೈಗೊಂಡು ಸಮಸ್ಯೆಯನ್ನು ಸ್ಥಳದಲ್ಲೇ ಪರಿಹರಿಸುವುದಾಗಿ ತಹಶೀಲ್ದಾರ ರೇಹಾನ್‌ಪಾಷ ತಿಳಿಸಿದರು. ಅವರು, ಗುರುವಾರ ತಾಲ್ಲೂಕಿನ ಚಿಕ್ಕಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾರ್ವಜನಿಕರು ನೀಡಿದ ಅರ್ಜಿಯ ವಿಚಾರಣೆ ನಡೆಸಿದರು.




## ರಾಷ್ಟ್ರೀಯ ಡೆಂಗ್ಯೂ ದಿನದ ಪ್ರಯುಕ್ತ ಜಾಥಾ

» ದಾವಣಗೆರೆ

ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಡೆಂಗ್ಯೂ ನಿಯಂತ್ರಣ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಮೇ.17 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಆವರಣದಿಂದ ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಾಥಾವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್ ಅವರು ಚಾಲನೆ ನೀಡುವರು. ಜಾಥಾವು ಚಾಮರಾಜಪೇಟೆ ಸರ್ಕ[illegible]ನಿಂದ ಆರಂಭವಾಗಿ ಭಾಷನಗರದ ಆರೋಗ್ಯ ಕೇಂದ್ರದವರೆಗೂ ಸಂಚರಿಸಿ ಮುಕ್ತಾಯಗೊಳ್ಳುತ್ತದೆ ಎಂದು ಜಿಲ್ಲಾ ವಿ.ಬಿ.ಡಿ.ಸಿ.ಪಿ ಅಧಿಕಾರಿ ತಿಳಿಸಿದ್ದಾರೆ.

## ಮೇ.ಮಾಹೆಗೆ ಪಡಿತರ ಹಂಚಿಕೆ

» ದಾವಣಗೆರೆ

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಮೇ ಮಾಹೆಗೆ ಅನ್ವಯವಾಗುವಂತೆ ಪಡಿತರ ಧಾನ್ಯ ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಪಡಿತರ ಚೀಟಿದಾರರಿಗೆ ಪ್ರತಿ ಕಾರ್ಡ್‌ಗೆ 35 ಕೆ.ಜಿ ಅಕ್ಕಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 5 ಕೆ.ಜಿ ಅಕ್ಕಿ ಉಚಿತವಾಗಿ ವಿತರಿಸಲಾಗುತ್ತದೆ. ಹಾಗೂ ಪ್ರತಿ ಕೆ.ಜಿ ಗೆ ರೂ.15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು. ಸರ್ಕಾರದ ಗ್ಯಾರಂಟಿ ಯೋಜನೆಯಡಿ 5 ಕೆ.ಜಿ ಅಕ್ಕಿ ಬದಲಾಗಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದ್ದು, ಯಾವುದೇ ರೀತಿಯ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪರಿಹರಿಸಿಕೊಳ್ಳಬಹುದೆಂದು ತಹಶೀಲ್ದಾರ್ ಡಾ.ಎಂ.ಬಿ.ಅಶ್ವಥ್ ತಿಳಿಸಿದ್ದಾರೆ.

## ಖಾಸಗಿ ನೀಟ್, ಜೆಇಇ, ಸಿಇಟಿ ಕೋಚಿಂಗ್, ಟುಟೋರಿಯಲ್, ಕೋಚಿಂಗ್ ನಡೆಸುವ

» ದಾವಣಗೆರೆ

ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಹಲವಾರು ಸಂಸ್ಥೆಗಳು ಜೆಇಇ, ನೀಟ್, ಸಿಇಟಿ, ಇತರೆ ಅಕಾಡೆಮಿ, ಟ್ಯೂಟೋರಿಯಲ್ ಸಂಸ್ಥೆಗಳನ್ನು ಅನಧಿಕೃತವಾಗಿ ನಡೆಸುತ್ತಿರುವುದು ಇಲಾಖೆ ಗಮನಕ್ಕೆ ಬಂದಿದ್ದು ಅಂತಹ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಶಾಲಾ ಶಿಕ್ಷಣ ಪದವಿ ಪೂರ್ವ ಇಲಾಖೆ ಉಪನಿರ್ದೇಶಕರಾದ ಕರಿಸಿದ್ದಪ್ಪ ಎಚ್ಚರಿಕೆ ನೀಡಿದ್ದಾರೆ. ಶಿಕ್ಷಣ ಇಲಾಖೆಯ ಅನುಮತಿ ಪಡೆಯದೇ ಇಂತಹ ಕೋಚಿಂಗ್ ಸೆಂಟರ್ ಗಳನ್ನು ಪ್ರಾರಂಭಿಸುವ ಮೂಲಕ ಅನಧಿಕೃತವಾಗಿ ಜಾಹಿರಾತು ನೀಡಿ ಸಾರ್ವಜನಿಕರಿಂದ ಮನಸುಇಚ್ಚೆ ಹಣವನ್ನು ವಸೂಲಿ ಮಾಡುವುದು ಕಂಡು ಬಂದಿರುತ್ತದೆ. ಮತ್ತು ಕಾನೂನುಬಾಹಿರವಾಗಿ ವಿದ್ಯಾರ್ಥಿಗಳಿಗೆ ಪಾಠಗಳನ್ನು ಮಾಡುತ್ತಿರುವುದನ್ನು ಗಮನಿಸಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಅನುಚ್ಚೇದ 35 ರ ಪ್ರಕಾರ ಮತ್ತು ಕರ್ನಾಟಕ ಟ್ಯೂಟೋರಿಯಲ್ ಇನ್ಸಿಟ್ಯೂಷನ್ಸ್ ನೊಂದಣಿ ಮತ್ತು ನಿಯಂತ್ರಣ ನಿಯಮಗಳು 2001 ರ ಪ್ರಕಾರ ಎಲ್ಲಾ ಕೋಚಿಂಗ್ ಸೆಂಟರ್ ಗಳು ಕಡ್ಡಾಯವಾಗಿ ನೊಂದಣಿಯಾಗಬೇಕಾಗಿ ರುತ್ತದೆ. ನೊಂದಣಿಯಾಗದೇ ಕೋಚಿಂಗ್ ಸೆಂಟರ್ ನಡೆಸುತ್ತಿದ್ದಲ್ಲಿ, ಅನಿರೀಕ್ಷಿತ ಭೇಟಿ ನೀಡಿ ಕಾನೂನು ರೀತ್ಯ ಕ್ರಮ ಜರುಗಿಸಲಾಗವುದೆಂದು ಅವರು ತಿಳಿಸಿದ್ದಾರೆ.

## ವಿಕಲಚೇತನರ ಮಕ್ಕಳಿಗೆ 6ನೇ ತರಗತಿ ಪ್ರವೇಶಕ್ಕೆ ಅವಕಾಶ

» ದಾವಣಗೆರೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 826 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ॥ ಬಿ.ಅರ್ ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾಗಾಂಧಿ, ಏಕಲವ್ಯ ಮಾದರಿ ವಸತಿ ಶಾಲೆ, ಕಾಲೇಜುಗಳ ಪೈಕಿ 807 ವಸತಿ ಶಾಲೆಗಳಲ್ಲಿ ಶೇ.25ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಹೆಚ್.ಐ.ವಿಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು ಗಳಿಗೆ ಶೇ.10 ಮೀಸಲಾತಿಯನ್ನು ನಿಗಧಿಪಡಿಸಿ 6ನೇ ತರಗತಿ ಪ್ರವೇಶ ಪಡೆಯಬಹುದು. ಜಿಲ್ಲೆಯ ವಿಕಲಚೇತನ ಮಕ್ಕಳು ಮೇಲ್ಕಂಡ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶ ಪಡೆಯಲು ಶೇ.10ರಷ್ಟು ಮೀಸಲಾತಿಯನ್ನು ಕಲ್ಪಿಸಿರುವುದರಿಂದ ಇದರ ಸದುಪಯೋಗವನ್ನು ಪಡೆಯಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ: ಸಂಬಂಧಪಟ್ಟ ವಸತಿ ನಿಲಯಗಳ ಮೇಲ್ವಿಚಾರಕರನ್ನು ಸಂಪರ್ಕಿಸಬೇಕೆಂದು ಜಿಲ್ಲಾ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.



# ಕಲಿಕಾ ಪುನಶ್ಚೇತನ ಮಕ್ಕಳ ಕಲಿಕೆಯ ಪುನರ್ಮನನ



ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಮೂಲಕ ಕಲಿಕಾ ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ 2022 ಹಾಗು 23 ರ ಶೈಕ್ಷಣಿಕ ವರ್ಷವನ್ನು ಈಗಾಗಲೇ ಶೈಕ್ಷಣಿಕ ಪುನಶ್ಚೇತನ ವರ್ಷವನ್ನಾಗಿ ಕರ್ನಾಟಕ ಶಿಕ್ಷಣ ಇಲಾಖೆ ಘೋಷಿಸಿದೆ.

ಹಿನ್ನೆಲೆ : ಕರಾಳ ಕರೋನಾ ಸಾಂಕ್ರಾಮಿಕ ರೋಗದ ಪರಿಣಾಮ ಈ ಹಿಂದಿನ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ಕಲಿಕೆ ಉತ್ತಮ ಮಟ್ಟದಲ್ಲಿ ಸಾಧಿತವಾಗಿಲ್ಲ. 2019-20 ಹಾಗು 2021-22 ರ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಹಿನ್ನಡೆ ಆಗಿದೆ. ಶಿಕ್ಷಕರು ಸಹ ತಂತ್ರಜ್ಞಾನದ ಅಲಭ್ಯತೆ ಪ್ರಯಾಣದ ಅನಾನುಕೂಲ ಕೋವಿಡ್ ನಿರ್ಬಂಧಗಳಿಂದ ಪರಿಣಾಮಕಾರಿಯಾಗಿ ಬೋಧನೆಯಲ್ಲಿ ತೊಡಗಿಸಿಕೊಳ್ಳಲು ಆಗಿರುವುದಿಲ್ಲ. ಆನ್‌ಲೈನ್ ಪಾಠಗಳು ಜಗಲಿ ಶಾಲೆ ವಠಾರ ಶಾಲೆ ಮನೆ ಶಾಲೆ ಮೊಬೈಲ್ ಶಾಲೆ ರೇಡಿಯೋ ಹಾಗು ದೂರದರ್ಶನ ಪಾಠಶಾಲೆ ಮುಂತಾದ ಕಲಿಕಾ ಕಾರ್ಯಕ್ರಮಗಳು ಎಲ್ಲ ವಿದ್ಯಾರ್ಥಿಗಳಿಗು ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗಿಲ್ಲ.

ಆಧುನಿಕ ತಾಂತ್ರಿಕ ಪರಿಕರವುಳ್ಳ ಕುಟುಂಬದ ಮಕ್ಕಳು ತಕ್ಕಷ್ಟು ಕಲಿಕೆ ಹೊಂದಿರಬಹುದು ಬಹುತೇಕ ಮಕ್ಕಳು ತಂತ್ರಜ್ಞಾನ ವಂಚಿತರಾಗಿರುವ ಕಾರಣ ಆಧುನಿಕ ತಂತ್ರಜ್ಞಾನ ಆಧಾರಿತ ಶಿಕ್ಷಣವು ಕೋವಿಡ್ ಹಿನ್ನೆಯಲ್ಲಿ ಪರಿಣಾಮಕಾರಿ ಶಿಕ್ಷಣ ನೀಡಲು ಪರ್ಯಾಯ ವಿಧಾನವಾಗಿ ಸೋತಿದೆ. ಶಾಲಾ ಕಾಲೇಜು ಶಿಕ್ಷಕರು ಸಾಕಷ್ಟು ಶ್ರಮಿಸಿ ವಿವಿಧ ಮೊಬೈಲ್ ಪಾಠಗಳ ಯೂಟೂಬ್ ಪಾಠಗಳ ತಯಾರಿಸಿದರು. ಕಲಿಕಾ ವಿದ್ಯಾರ್ಥಿಗಳು ಅವುಗಳ ನೆರವು ಪಡೆದು ನಿಗದಿಪಡಿಸಿದ ಕಲಿಕಾ ಫಲಗಳ ಹೊಂದುವಲ್ಲಿ ಹಿನ್ನಡೆಯನ್ನ ಹೊಂದಿದ್ದಾರೆ. ಒಟ್ಟಾರೆ ಶಿಕ್ಷಣ ಇಲಾಖೆಯ ಸಾಕಷ್ಟು ಶೈಕ್ಷಣಿಕ ಪ್ರಯತ್ನಗಳು ಕಳೆದ ಎರಡು ವರ್ಷಗಳಲ್ಲಿ ಮಕ್ಕಳನ್ನು ಪ್ರಭಾವಿಸುವಲ್ಲಿ ಸೋತಿವೆ. ಇದನ್ನು ಗಮನಿಸಿರುವ ಸರ್ಕಾರ ಮತ್ತು ಶಿಕ್ಷಣ ಇಲಾಖೆ 2022-23 ನೇ ಸಾಲಿನಲ್ಲಿ ಹಿಂದುಳಿದಿರುವ ಕಲಿಕಾ ಸಾಮರ್ಥ್ಯಗಳ ಪುನರ್ ಗಳಿಕೆಗೆ ಯೋಜನೆ ರೂಪಿಸಿ ಈಗ ಕಾರ್ಯಗತ ಮಾಡುತ್ತಿದೆ.

ರೂಪುರೇಷೆ : ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ಹಿಂದಿನ ವರ್ಷಗಳ ಕಲಿಕಾ ಅಂಶಗಳನ್ನು ಸಮ್ಮಿಳಿತವಾಗಿಸಿ ಪಠ್ಯಪುಸ್ತಕಗಳಲ್ಲಿಯೇ ಸಮಗ್ರ ಕಲಿಕಾ ಫಲಗಳಿಗೆ ತಕ್ಕಂತ ಚಟುವಟಿಕೆಗಳ ಆಯೋಜಿಸಲಾಗಿದೆ. ಈಗ ಮೂರನೇ ತರಗತಿಯಲ್ಲಿನ ಮಗುವಿಗೆ ಹಿಂದಿನ ಒಂದು ಹಾಗು ಎರಡನೆ ತರಗತಿಗಳ ಕಲಿಕಾ ಸಾಮರ್ಥ್ಯಗಳ ಪಾಠಗಳು ಇರುವಂತೆ ಪಠ್ಯಪುಸ್ತಕಗಳ ಈಗಾಗಲೇ ರಚಿಸಲಾಗಿದೆ ಮತ್ತು ಪೂರಕವಾಗಿ ಕಲಿಕಾ ಹಾಳೆಗಳನ್ನು ತಯಾರಿಸಲಾಗಿದೆ. ಇದೇ ರೀತಿ ಒಂದರಿಂದ ಒಂಬತ್ತನೇ ತರಗತಿಯವರೆಗೆ ಪಠ್ಯಪುಸ್ತಕ ಹಾಗು ಕಲಿಕಾ ಹಾಳೆಗಳ ಗುಚ್ಚ ತಯಾರಿಸಲಾಗಿದೆ. ಶಿಕ್ಷಕರು ಇಲಾಖೆ ಒದಗಿಸಿದ ಸಾಮಗ್ರಿಗಳನ್ನು ಬಳಸಿಕೊಂಡು ವೇಳಾಪಟ್ಟಿವಾರು ಮಕ್ಕಳಿಗೆ ಕಲಿಕೆ ನೀಡುವರು.

ಮೌಲ್ಯಮಾಪನ : ವಾರದ ಕೊನೆಯ ದಿನ ಮಕ್ಕಳು ಕಲಿತಂತಹ ಅಂಶಗಳ ಅವಲೋಕಿಸುವ ಅವಕಾಶವಿದೆ. ಇದಕ್ಕಾಗಿ ಪ್ರಶ್ನಿಸುವ ಅಥವಾ ಉತ್ತರಿಸುವ ಪ್ರಶ್ನಾವಳಿ ಸಂದರ್ಶಿಸುವ ಚರ್ಚಿಸುವ ಅವಲೋಕಿಸುವ ಇತರ ಯೋಜನಾ ತಂತ್ರಗಳ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ. ಪ್ರತಿ ಕಲಿಕಾಂಶದ ನಂತರವು ಸಹ ವಿವಿಧ ಸಾಧನ ತಂತ್ರಗಳ ಮೂಲಕ ಮೌಲ್ಯಮಾಪನ ಕೈಗೊಳ್ಳಲು ಶಿಕ್ಷಕರಿಗೆ ಸಮಯ ನಿಗದಿಪಡಿಸಲಾಗಿದೆ.

ವರ್ಷಪೂರ್ತಿ ಸೇತುಬಂಧ : ಹಿಂದಿನ ವರ್ಷಗಳಲ್ಲಿ ಶಾಲೆ ಆರಂಭದ ಹದಿನೈದು ದಿನಗಳಲ್ಲಿ ಕೈಗೊಳ್ಳುತ್ತಿದ್ದ ಸೇತುಬಂಧ ಈಗ ವರ್ಷಪೂರ್ತಿ ನಡೆಯುತ್ತದೆ. ಇದು ಹೆಚ್ಚುವರಿ ಕಾರ್ಯವೇನಲ್ಲ. ಪಾಠದ ಜೊತೆಯಲ್ಲಿಯೇ ನಡೆಯುವಂತಹದ್ದು. ಸಂಬಂಧಿಸಿದ ವಿಷಯಗಳ ಕಲಿತಿರುವರೇ ಎಂದು ವಾರಕ್ಕೊಮ್ಮೆ ಅಥವಾ ಕಲಿಕಾಂಶ ಕಲಿಸಿದ ನಂತರ ಪುನರ್ ಅವಲೋಕಿಸಿ ಹಿಂದುಳಿದಿರುವ ಮಕ್ಕಳಿಗೆ ಪುನಃ ಕಲಿಕಾ ಚಟುವಟಿಕೆಗಳ ನಡೆಸುವುದು.

ಕಲಿಕಾ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳ ಕಲಿಕಾ ವಿಷಯಗಳ ಪೂರ್ವ ಪರೀಕ್ಷೆ ಮೂಲಕ ಖಾತ್ರಿ ಮಾಡಿಕೊಳ್ಳಲು ನೈದಾನಿಕ ಪರೀಕ್ಷೆಯ ನಡೆಸುವುದು. ನಂತರ ಕಲಿಕಾ ಹಿಂದುಳಿದ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ಚಟುವಟಿಕೆಗಳ ನೀಡಿ ಕಲಿಕಾ ಪುನರ್ಮನನ ನಡೆಸಿ ಉತ್ತರ ಪರೀಕ್ಷೆಗಳ ನಡೆಸಿ ಸೇತುಬಂಧ ಮುಕ್ತಾಯಗೊಳಿಸಲಾಗುತ್ತಿತ್ತು. ಈಗ ಶೈಕ್ಷಣಿಕ ವರ್ಷದ ಆರಂಭದಿಂದಲೇ ತರಗತಿವಾರು ವಿಷಯವಾರು ಹಿಂದಿನ ತರಗತಿಗಳ ಕಲಿಕಾಂಶಗಳ ಜೊತೆಗೆ ಈಗಿನ ತರಗತಿಯ ವಿಷಯಗಳ ಸಮ್ಮಿಳಿತ ಮಾಡಿರುವುದರಿಂದ ಸೇತುಬಂಧ ವರ್ಷಪೂರ್ತಿ ನಡೆಸಿದಂತಾಗುತ್ತದೆ.

ಐದನೇ ತರಗತಿಗೆ ಐದು ಅಂಕಿ ಸಂಖ್ಯೆಗಳ ಪರಿಕಲ್ಪನೆ ಕಲಿಕೆಗೆ ಇರುತ್ತದೆ. ಈ ಹಿಂದಿನ ತರಗತಿಗಳಲ್ಲಿ ಎರಡಂಕಿಯಿಂದ ನಾಲ್ಕಂಕಿಯವರೆಗೆ ಕಲಿತಿರಬೇಕಾಗುತ್ತದೆ ಐದನೇ ತರಗತಿ ವಿದ್ಯಾರ್ಥಿ ಈ ಕಲಿಕಾಂಶ ಕಲಿತಿರದಿದ್ದರೆ ಅಥವಾ ಕಲಿತು ಪುನರ್ಮನನ ಸಾಧ್ಯವಾಗದಿದ್ದರೆ ಈಗ ಪುನಃ ಮೂರಂಕಿ ನಾಲ್ಕಂಕಿ ಸಾಮರ್ಥ್ಯಗಳ ಕಲಿಸಿ ಐದಂಕಿ ಸಾಮರ್ಥ್ಯ ಕಲಿಸಲಾಗುತ್ತದೆ. ಇದೇ ರೀತಿ ದಶಕ ರಹಿತ ಸಂಕಲದಿಂದ ದಶಕ ಸಹಿತ ಸಂಕಲನ ಎರಡಂಕಿ ಸಂಕಲನ ವ್ಯವಕಲದಿಂದ ಮೂರಂಕಿ ಹಾಗು ನಾಲ್ಕಂಕಿ ಸಂಕಲನ ವ್ಯವಕಲನ ಕಲಿಕೆ ನಡೆಯುತ್ತದೆ. ಈ ತೆರನಾಗಿ ಉಳಿದ ವಿಷಯಗಳ ಕಲಿಕೆಯೂ ಸಾಗುತ್ತದೆ.

ಕಾರ್ಯ ಯೋಜನೆ: ರಾಜ್ಯ ಹಂತದಲ್ಲಿ ಪಠ್ಯಪುಸ್ತಕ ಸಂಘದಿಂದ ಈಗಾಗಲೇ ಕಲಿಕಾ ಪುನರ್ಮನನ ವರ್ಷಕ್ಕೆ ಪಠ್ಯಪುಸ್ತಕಗಳು ಹಾಗು ಕಲಿಕಾ ಹಾಳೆಗಳು ಮುದ್ರಣಗೊಂಡಿವೆ. ಮೇ ಹದಿನೈದರ ವೇಳೆಗೆ ರಾಜ್ಯದ ಎಲ್ಲ ಶಾಲೆಗಳಿಗೆ ಅವು ಸರಬರಾಜು ಆಗಲಿವೆ. ಜಿಲ್ಲಾ ಹಾಗು ತಾಲ್ಲೋಕು ಹಂತಗಳಲ್ಲಿ ಸಂಪನ್ಮೂಲ ಕೇಂದ್ರಗಳಿಂದ ಎಲ್ಲ ಶಿಕ್ಷಕರಿಗು ಎರಡು ದಿನಗಳ ತರಬೇತಿ ಆಯೋಜಿಸಲಾಗಿದೆ.



ರಾಜ್ಯ ಹಂತದಿಂದ ತಾಲ್ಲೋಕು ಹಂತದವರೆಗು ನೋಡಲ್ ಅಧಿಕಾರಿಗಳು ಹಾಗು ವಿಷಯ ಪರಿವೀಕ್ಷಕರ ಜೊತೆಗೆ ಅನುಷ್ಠಾನಾಧಿಕಾರಿಗಳು ಕಲಿಕಾ ಕಾರ್ಯಕ್ರಮವನ್ನು ಅವಲೋಕಿಸಿ ಮಾರ್ಗದರ್ಶನ ಮಾಡಲಿದ್ದಾರೆ. ಅಜೀಂ ಪ್ರೇಮಂಜಿ ಪೌಂಡೇಶನರವರು ಕಲಿಕಾ ಪುನಶ್ಚೇತನ ಕಾರ್ಯಕ್ರಮದ ಯಶಸ್ಸಿಗೆ ಇಲಾಖೆಯವರೊಂದಿಗೆ ಸಹಕಾರ ನೀಡುತ್ತಿದ್ದಾರೆ.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T